ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೭**

ಒಟ್ಟು ಪ್ರಶ್ನೆಗಳು – ೧೧೯

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತನೆಯ ಅಧಿವೇಶನ**
**(ಮುಂದುವರೆದ ಉಪವೇಶನ)**

**ಬುಧವಾರ, ದಿನಾಂಕ : ೨೩ನೇ ಮಾರ್ಚ್, ೨೦೧೬**

---

## ಸಮೂಹ – III

೧. ಅರಣ್ಯ ಸಚಿವರು.

೨. ಕಂದಾಯ ಸಚಿವರು.

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು.

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

೫. ಸಣ್ಣ ನೀರಾವರಿ ಸಚಿವರು.

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು.

೭. ಕಾರ್ಮಿಕ ರಾಜ್ಯ ಸಚಿವರು.

---

## ರಾಜ್ಯದಲ್ಲಿ ಈ ಬಾರಿ ಉಂಟಾದ ಬರದ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):–**

೫೯೦(೭೫೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಈ ಬಾರಿ ಉಂಟಾದ ಬರ ಪರಿಸ್ಥಿತಿಯಿಂದಾಗಿ ರೈತರಿಗೆ ಉಂಟಾದ ನಷ್ಟ ಎಷ್ಟು ;

(ಆ) ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ತಲಾ ಎಷ್ಟು ಅನುದಾನವನ್ನು ಬರ ಪೀಡಿತ ಪ್ರದೇಶ ರೈತರಿಗೆ ನೀಡಲಾಗಿದೆ ;

(ಇ) ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ಧನ ನೀಡಲಾಗಿದೆಯೇ ; ವಿಜಯಪುರ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳ ರೈತರ ಪಟ್ಟಿ ಅನುಭವಿಸಿದ ನಷ್ಟ ಪರಿಹಾರವಾಗಿ ನೀಡಿದ ಹಣದ ಮೊತ್ತ ಎಷ್ಟು ಆತ್ಮಹತ್ಯೆ ಮಾಡಿಕೊಂಡ ರೈತರೆಷ್ಟು ? (ರೈತವಾರು ಮಾಹಿತಿ ಒದಗಿಸುವುದು)

## ಆಲಮಟ್ಟಿ ಅಣೆಕಟ್ಟಿನ ಸಮಗ್ರ ಪ್ರದೇಶದ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):–**

೫೯೧(೭೫೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಲಮಟ್ಟಿ ಅಣೆಕಟ್ಟಿನಲ್ಲಿ ಎಷ್ಟು ಪ್ರದೇಶ ಮುಳಗಡೆ ಆಗುತ್ತಿದೆ ;

(ಆ) ಆಲಮಟ್ಟಿ ಅಣೆಕಟ್ಟನ್ನು ಮತ್ತಷ್ಟು ಎತ್ತರಕ್ಕೆ ಕಟ್ಟುವ ಯೋಜನೆ ಸರ್ಕಾರದ ಮುಂದಿದೆಯೇ ;

(ಇ) ಇದಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ಯಾವ ಯಾವ ಪ್ರದೇಶಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮಾಡಲಾಗುವುದು ;

(ಈ) ಹಾಗಿದ್ದಲ್ಲಿ, ಅಂದಾಜು ಎಷ್ಟು ವೆಚ್ಚ ತಗುಲಬಹುದು ; ಯಾವಾಗಿನಿಂದ ಕಾಮಗಾರಿ ಕೈಗೆತ್ತಿಗೊಳ್ಳಲಾಗುವುದು;

## ಜಿಲ್ಲಾಧಿಕಾರಿಗಳು ಮಿಸಲೇನಿಯಸ್ ಪಿ.ಡಿ.ಅಕೌಂಟ್‌ಗಳ ಬಗ್ಗೆ

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):–**

೫೯೨(೭೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಪ್ರತಿ ಜಿಲ್ಲಾಧಿಕಾರಿಗಳ ಮಿಸಲೇನಿಯಸ್ ಪಿ.ಡಿ.ಅಕೌಂಟ್ ಯಾವುವು ; (ಪ್ರತಿಯೊಂದರ ವಿವರ ನೀಡುವುದು) ೨೦೧೫ ಡಿಸೆಂಬರ್ ೩೧ಕ್ಕೆ ಕೊನೆಗೊಂಡಂತೆ ಆ ಖಾತೆಯಲ್ಲಿರುವ ಹಣದ ವಿವರ ; (ಪ್ರತಿ ಖಾತೆಯ ಕಳೆದ ೦೩ ವರ್ಷಗಳ ಜಮಾ ಖರ್ಚು ವಿವರದೊಂದಿಗೆ ನೀಡುವುದು)

(ಆ) ೨೦೦೮ರಿಂದ ೨೦೧೩ರ ಅವಧಿಯ ಶಾಸಕರ ನಿಧಿಯ ಖರ್ಚು ವೆಚ್ಚಗಳು ಎಷ್ಟು ; ಪ್ರತಿಯೊಬ್ಬ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯ ಅನುದಾನದ ಜಮಾ ಖರ್ಚು ಎಷ್ಟು ; (ವಿವರ ನೀಡುವುದು) ಈ ಅವಧಿಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಖರ್ಚಾಗದೇ ಉಳಿದಿರುವ ಹಣವೆಷ್ಟು ?

## ವಿಜಯಪುರ, ಬಾಗಲಕೋಟೆ, ಬೆಳಗಾವಿ ಐ.ಟಿ.ಐ. ಕಾಲೇಜುಗಳ ಕುರಿತು

**ಶ್ರೀ ಅರುಣ ಶಹಾಪುರ ( ಶಿಕ್ಷಕರ ಕ್ಷೇತ್ರ ):–**

೫೯೩(೭೫೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ, ಬಾಗಲಕೋಟೆ, ಬೆಳಗಾವಿ ಜಿಲ್ಲೆಗಳಲ್ಲಿರುವ ಐ.ಟಿ.ಐ. ಕಾಲೇಜುಗಳು ಎಷ್ಟು ; (ಸರ್ಕಾರಿ ಅನುದಾನಿತ ಅನುದಾನರಹಿತ ಕಾಲೇಜುಗಳ ವಿಳಾಸ ಸಹಿತ ವಿವರ ಒದಗಿಸುವುದು)

(ಆ) ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು ? (ಪ್ರತಿಯೊಬ್ಬ ಶಿಕ್ಷಕರ ಹೆಸರು ವಿಳಾಸ ಸಹಿತ ವಿವರ ನೀಡುವುದು)

## ನೀರಾವರಿ ಇಲಾಖೆಯ ಯೋಜನೆಗಳಿಗೆ ಬಿಡುಗಡೆಯಾಗಿರುವ ಹಣದ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೪೪(೮೦೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಮೀಸಲಿಟ್ಟ ಹಣವೆಷ್ಟು ; ಕಾವೇರಿ ಕೃಷ್ಣ ಭದ್ರ ಮತ್ತು ಇತರೆ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ ;

(ಆ) ಸದರಿ ಸಾಲಿನಲ್ಲಿ ಎಷ್ಟು ಎಕರೆ ಭೂಮಿಗೆ ನೀರಾವರಿಯನ್ನು ಕಲ್ಪಿಸಿಕೊಡಲಾಗಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಿಂದ ರಾಜ್ಯದ ನೀರಾವರಿ ಇಲಾಖೆಗೆ ಬಂದಿರುವ ಹಣವೆಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಈ) ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಭಾರಿ ಮತ್ತು ಮಧ್ಯಮ ನೀರಾವರಿಯ ಯಾವ ಯಾವ ಯೋಜನೆಗಳಿಗಾಗಿ ಬೇಡಿಕೆಯನ್ನು ಇಡಲಾಗಿದೆ ?

## ಅಸಂಘಟಿತ ಕಾರ್ಮಿಕರ ನೋಂದಣಿ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೯೫(೭೨೦) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೨೦೧೫ ಮತ್ತು ೨೦೧೫–೧೬ರಲ್ಲಿ ಅಸಂಘಟಿತ ಕಾರ್ಮಿಕ ಕ್ಷೇತ್ರದಲ್ಲಿ ನೋಂದಣಿಯಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕೌಸಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಯಾವ ಯಾವ ಟ್ರೇಡ್‌ನಲ್ಲಿ ಫಲಾನುಭವಿಗಳು ತರಬೇತಿ ಪಡೆದಿರುತ್ತಾರೆ ; ಕೌಶಲ್ಯ ಪಡೆದ ವಿದ್ಯಾರ್ಥಿಗಳಿಗೆ ಗೌರವಧನ ನೀಡಲಾಗಿದೆಯೇ ? (ನೀಡಿದ್ದರೆ, ನೀಡಿದ ಮತ್ತು ಪಡೆದ ಫಲಾನುಭವಿಗಳ ವಿವರವನ್ನು ಜಿಲ್ಲಾವಾರು ನೀಡುವುದು)

## ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೯೬(೮೦೫) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ರಾಷ್ಟ್ರೀಯ ಕೆರೆ ಸಂರಕ್ಷಣೆ ಯೋಜನೆಯಡಿ ರಾಜ್ಯದ ಯಾವ ಯಾವ ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ ;

(ಆ) ಇದಕ್ಕಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ;

(ಇ) ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆಯಡಿ ಯಾವ ಯಾವ ಕೆರೆಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಲಾಗಿದೆ ;

(ಈ) ಬೆಂಗಳೂರು ನಗರದಲ್ಲಿರುವ ಯಾವ ಯಾವ ಕೆರೆಗಳಿಗೆ ಕೊಳಚೆ ನೀರು ಹರಿಯುವುದನ್ನು ತಪ್ಪಿಸಲಾಗಿದೆ ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿರುವ ನದಿಗಳ ವ್ಯಾಜ್ಯಗಳ ಬಗ್ಗೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೯೭(೭೯೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ರಾಜ್ಯದಲ್ಲಿ ಯಾವ ಯಾವ ನದಿಗಳು ವ್ಯಾಜ್ಯಕ್ಕೆ ಒಳಪಟ್ಟಿವೆ ; ವ್ಯಾಜ್ಯಕ್ಕೆ ಒಳಪಟ್ಟ ನದಿಗಳ ವಿಚಾರವಾಗಿ ನ್ಯಾಯಾಂಗದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆಯೇ ; ಇದ್ದರೆ, ಸದರಿ ಮೊಕದ್ದಮೆಗಳ ವಿಚಾರಣೆ ಯಾವ ಯಾವ ಹಂತದಲ್ಲಿವೆ ? (ಮೊಕದ್ದಮೆವಾರು ವಿವರ ನೀಡುವುದು)

## ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಅಭಿವೃದ್ಧಿ ಪಡಿಸಲಾದ ಕೆರೆಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೫೯೮(೭೮೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪ್ಪನಹಳ್ಳಿ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಹೂಳುತೆಗೆದು ಅಭಿವೃದ್ಧಿಪಡಿಸಲಾಗಿರುವ ಕೆರೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಕೆರೆಗಳ ದುರಸ್ತಿ ಹಾಗೂ ಅಭಿವೃದ್ಧಿಪಡಿಸಲು ಖರ್ಚು ಮಾಡಿದ ಹಣವೆಷ್ಟು ; ಖರ್ಚು ಮಾಡದೆ ಉಳಿದ ಹಣವೆಷ್ಟು ; ಖರ್ಚು ಮಾಡದಿರಲು ಕಾರಣಗಳೇನು ; (ವಿವರ ನೀಡುವುದು)

(ಇ) ಈ ಭಾಗದಲ್ಲಿ ಕೆರೆಗಳನ್ನು ಶಾಶ್ವತವಾಗಿ ಉಳಿಸಲು ಹಾಗೂ ಪುನಶ್ಚೇತನ, ದುರಸ್ತಿ ಕಾರ್ಯ, ಅಭಿವೃದ್ಧಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಜಲಸಂಪನ್ಮೂಲ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಸುತ್ತಿರುವ ಉನ್ನತ ಅಧಿಕಾರಿಗಳ ತನಿಖೆ ನಡೆಸುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೫೯(೭೭೪) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಜಲಸಂಪನ್ಮೂಲ ಇಲಾಖೆಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ಇಲಾಖೆಯ ನೌಕರರೇ ಮಾನ್ಯ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದು ತನಿಖೆಗೆ ಆದೇಶಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇಲಾಖೆಗೆ ಸುಮಾರು ವಾರ್ಷಿಕ ೧೦ ಸಾವಿರ ಕೋಟಿ ರೂ ಗೂ ಹೆಚ್ಚು ಅನುದಾನ ಹೊಂದಿರುವ ಬೃಹತ್ ಇಲಾಖೆ ಭ್ರಷ್ಟತೆಯ ಕಳಂಕ ಅಂಟಿಸಿದವರ ವಿರುದ್ಧ ತನಿಖೆ ಆದೇಶಿಸಿ ಮೂರು ತಿಂಗಳು ಕಳೆದರೂ ಸಂಬಂಧಿಸಿದ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳ ಮೇಲೆ ತನಿಖೆ ಹಾಗೂ ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಭ್ರಷ್ಟಾಚಾರ ನಡೆಸುತ್ತಿರುವ ಉನ್ನತ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಇವರ ವಿರುದ್ಧ ತನಿಖೆ ನಡೆಸಲು ಉನ್ನತ ಸಮಿತಿ ರಚಿಸಲಾಗಿದೆಯೇ ? (ಮಾಹಿತಿ ಒದಗಿಸುವುದು)

## ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಆದಂತಹ ನೀರಾವರಿ ಕಾಮಗಾರಿಗಳ ವೆಚ್ಚದ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೬೦೦(೭೫೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿ ಇರುವ ನೀರಾವರಿ ಯೋಜನೆಗಳು ಯಾವುವು ; ಸದರಿ ಯೋಜನೆಗಳು ಪ್ರಾರಂಭಗೊಂಡಿದ್ದು ಯಾವಾಗ ಮೂಲ ಯೋಜನಾ ವೆಚ್ಚ ಎಷ್ಟು ; (ಯೋಜನಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಯೋಜನೆಗಳಲ್ಲಿ ಇಲ್ಲಿಯವರೆಗೆ ಆದಂತಹ ಕಾಮಗಾರಿಗಳು ಯಾವುವು ; ಯೋಜನಾವಾರು, ಕಾಲುವೆಗಳವಾರು ಇಲ್ಲಿಯವರೆಗೆ ಆದಂತಹ ವೆಚ್ಚ ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಹೈದರಾಬಾದ್–ಕರ್ನಾಟಕ ಪ್ರದೇಶದ ೬ ಜಿಲ್ಲೆಗಳಲ್ಲಿ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೬೦೧(೭೫೧) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹೈದರಾಬಾದ್–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿ ಇರುವ ನೀರಾವರಿ ಯೋಜನೆಗಳು ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಯೋಜನೆಗಳ ಅಡಿಯಲ್ಲಿ ಇಲ್ಲಿಯವರೆಗೆ ಆಧುನೀಕರಣ ಪುನಃಶ್ಚೇತನ ನವೀಕರಣ ಕಾಮಗಾರಿ ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಯೋಜನಾವಾರು, ಕಾಮಗಾರಿವಾರು, ವೆಚ್ಚಾವಾರು ಪ್ರತ್ಯೇಕ ಮಾಹಿತಿ ನೀಡುವುದು ;

(ಇ) ಸದರಿ ಯೋಜನೆಗಳ ಅಡಿಯಲ್ಲಿ ಆಧುನೀಕರಣ ಪುನಃಶ್ಚೇತನ ನವೀಕರಣ ಕಾಮಗಾರಿ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಮಾಹಿತಿ ನೀಡುವುದು)

## ಮಂಡ್ಯ ಜಿಲ್ಲೆಯಲ್ಲಿನ ಕೆರೆಗಳ ಬಗ್ಗೆ

**ಶ್ರೀ ಎನ್.ಅಪ್ಪಾಜಿಗೌಡ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೬೦೨(೭೫೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಕೆರೆಗಳ ವಿಸ್ತೀರ್ಣ, ನೀರಿನ ಸಾಮರ್ಥ್ಯ ಎಷ್ಟು ; (ಪೂರ್ಣ ವಿವರ ನೀಡುವುದು)

(ಇ) ಸದರಿ ಕೆರೆಗಳಲ್ಲಿ ಹೂಳು ತುಂಬಿ ನೀರಿನ ಸಾಮರ್ಥ್ಯ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಬಂದಿದ್ದಲ್ಲಿ, ಕೆರೆಗಳ ವಿವರ ನೀಡುವುದು)

(ಈ) ಕಳೆದ ೧೦ ವರ್ಷಗಳಲ್ಲಿ ಯಾವ ಯಾವ ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿ ಕೈಗೊಳ್ಳಲಾಗಿದೆ ; ಇದಕ್ಕೆ ತಗಲಿರುವ ಒಟ್ಟು ವೆಚ್ಚ ಎಷ್ಟು ? (ಕೆರೆಗಳವಾರು ಸಂಪೂರ್ಣ ವಿವರ ನೀಡುವುದು)

## ೨೦೧೫–೧೬ನೇ ಸಾಲಿನಲ್ಲಿ ಬರ ಪರಿಹಾರ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನ ಬಗ್ಗೆ

**ಶ್ರೀ ಎನ್.ಅಪ್ಪಾಜಿಗೌಡ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೬೦೩(೭೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯಕ್ಕೆ ೨೦೧೫–೧೬ನೇ ಸಾಲಿನಲ್ಲಿ ಬರ ಪರಿಹಾರ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು ; ಅದರಲ್ಲಿ ರಾಜ್ಯದ ಪಾಲೆಷ್ಟು ; ಕೇಂದ್ರ ಸರ್ಕಾರದ ಪಾಲೆಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಅನುದಾನದಲ್ಲಿ ಕೈಗೊಂಡ ಕಾರ್ಯಕ್ರಮಗಳೇನು ; (ವಿವರ ನೀಡುವುದು)

(ಇ) ಸದರಿ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ಬಳಸಲಾಗಿದೆ ; (ಖರ್ಚಾಗಿರುವ ಅನುದಾನದ ವಿವರ ನೀಡುವುದು)

(ಈ) ಕೆಲ ಜಿಲ್ಲೆಗಳಲ್ಲಿ ಅನುದಾನ ಬಳಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

## ಕೆರೆಗಳ ಸರ್ವೆ ಕಾರ್ಯ

**ಶ್ರೀ ಎನ್.ಅಪ್ಪಾಜಿಗೌಡ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೬೦೪(೭೪೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯಲ್ಲಿ ಕೆರೆಗಳ ಸರ್ವೆ ನಡೆಸಲಾಗಿದೆಯೇ ; ಕೈಗೊಂಡಿದ್ದಲ್ಲಿ ಯಾವಾಗ ; (ವಿವರ ನೀಡುವುದು)

(ಆ) ಸರ್ವೆ ಪ್ರಕಾರ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಈ ಪೈಕಿ ಒತ್ತುವರಿಯಾಗಿರುವ ಕೆರೆಗಳ ಸಂಖ್ಯೆ ಎಷ್ಟು ;

(ಈ) ಒತ್ತುವರಿಯಾಗಿರುವ ಕೆರೆಗಳ ಪೈಕಿ ತೆರವುಗೊಳಿಸಲಾದ ಕೆರೆಗಳ ಸಂಖ್ಯೆ ಎಷ್ಟು ;

(ಉ) ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವವರ ವಿವರ ನೀಡುವುದು ; ಇವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ? (ತಾಲ್ಲೂಕುವಾರು ವಿವರ ನೀಡುವುದು)

## ಅರಣ್ಯ ಪ್ರದೇಶಾಭಿವೃದ್ಧಿ

**ಶ್ರೀ ಎನ್.ಅಪ್ಪಾಜಿಗೌಡ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೬೦೫(೭೪೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾಡಿದ್ದರೆ ನಾಡು ಎಂಬಂತೆ ರಾಜ್ಯದಲ್ಲಿರುವ ಅರಣ್ಯ ಪ್ರದೇಶವೆಷ್ಟು ;

(ಆ) ಪ್ರತಿವರ್ಷ ಎಷ್ಟು ಪ್ರಮಾಣದ ಅರಣ್ಯ ನಾಶವಾಗುತ್ತಿದೆ ;

(ಇ) ಅರಣ್ಯ ನಾಶದಿಂದ ಮಳೆಯ ಪ್ರಮಾಣ ಕಡಿಮೆಯಾಗಿ ಜನ, ಜಾನುವಾರುಗಳಿಗೆ ಕುಡಿಯುವ ನೀರು, ಕೃಷಿಗೆ ನೀರಿನ ಅಭಾವವಾಗಿ ಗಂಭೀರ ಸಮಸ್ಯೆ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಅರಣ್ಯ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ರಾಜ್ಯಾದ್ಯಂತ ಕಳೆದ ೩ ವರ್ಷಗಳಲ್ಲಿ ಅರಣ್ಯ ಇಲಾಖೆ ಎಷ್ಟು ಸಸಿಗಳನ್ನು ಬೆಳಸಿದೆ ; ಇದಕ್ಕೆ ತಗುಲಿದ ವೆಚ್ಚವೆಷ್ಟು ; (ವಿವರ ನೀಡುವುದು)

(ಉ) ಇನ್ನೂ ಎಷ್ಟು ಪ್ರದೇಶದಲ್ಲಿ ಸಸಿಗಳನ್ನು ಬೆಳೆಸಲು ಉದ್ದೇಶಿಸಲಾಗಿದೆ ? (ವಿಭಾಗವಾರು, ವಲಯವಾರು ವಿವರ ನೀಡುವುದು)

## ನೌಕರರ ಹಿತರಕ್ಷಣೆಗಾಗಿ ಸಂಘ ಸಂಸ್ಥೆಗಳ ರಚನೆಯ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೭೦೬(೮೮೬) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯಾವುದೇ ಇಲಾಖೆಯಲ್ಲಿ ನೌಕರರ ಕ್ಷೇಮಾಭಿವೃದ್ಧಿಗಾಗಿ ಸಂಘ ಸಂಸ್ಥೆಗಳನ್ನು ರಚಿಸಿಕೊಳ್ಳಲು ಅವಕಾಶವಿರುವ ವಿಷಯ ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಆದೇಶದ ಪ್ರತಿಯನ್ನು ಒದಗಿಸುವುದು ;

(ಆ) ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ತಾಂತ್ರಿಕ ಮತ್ತು ತಾಂತ್ರಿಕೇತರ ನೌಕರರ ಕ್ಷೇಮಾಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಗಳು ಯಾವುವು ; (ಹೆಸರು, ಪ್ರಾರಂಭಗೊಂಡ ಅವಧಿಯ ವಿವರಗಳು ಮತ್ತು ಈ ಸಂಘಸಂಸ್ಥೆಗಳ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವವರ ಹೆಸರು, ಹುದ್ದೆ ಮತ್ತು ಕಾರ್ಯನಿರ್ವಹಿಸುತ್ತಿರುವ ಕಛೇರಿ / ಸಂಸ್ಥೆಗಳ ವಿವರಗಳನ್ನು ನೀಡುವುದು)

(ಇ) ಯಾವುದೇ ಸಂಘಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸಲು ಇಲಾಖೆಯ ಮುಖ್ಯಸ್ಥರ ಅನುಮತಿ ಪಡೆಯುವುದು ಕಡ್ಡಾಯವೇ ; ಸಂಘ ಸಂಸ್ಥೆಗಳಲ್ಲಿ ಇದುವರೆಗೂ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿರುವ / ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸದಸ್ಯರು ಇಲಾಖಾವತಿಯಿಂದ ಅನುಮತಿ ಪಡೆದಿರುತ್ತಾರೆಯೇ ; ಹಾಗಿದ್ದಲ್ಲಿ, ಈವರೆಗೂ ಅನುಮತಿ ನೀಡಿರುವ ಪತ್ರಗಳ ಪ್ರತಿಗಳನ್ನು ನೀಡುವುದು ?

## ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗದೇ ಇರುವ ಕಿರಿಯ ತರಬೇತಿ ಅಧಿಕಾರಿಗಳ ವಿರುದ್ಧ ಇಲಾಖಾ ವತಿಯಿಂದ ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೬೦೭(ಅಅಜ) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇಲಾಖಾ ವತಿಯಿಂದ ನಡೆಸಲಾಗುವ ಅಖಿಲ ಭಾರತ ವೃತ್ತಿ ಪರೀಕ್ಷೆಗಳ ಪ್ರಾಯೋಗಿಕ ಪರೀಕ್ಷೆಗಳಿಗೆ (ಸಿ.ಟಿ.ಎಸ್ ಮತ್ತು ಎ.ಟಿ.ಎಸ್) ನೇಮಿಸಲಾಗುವ ಕಿರಿಯ ತರಬೇತಿ ಅಧಿಕಾರಿಗಳು ಪರೀಕ್ಷಾ ಕಾರ್ಯಕ್ಕೆ ಹಾಜರಾಗದಿದ್ದಲ್ಲಿ, ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲು ಅವಕಾಶವಿರುವ ಬಗ್ಗೆ ಸರ್ಕಾರದ ಗಮನಕ್ಕಿದೆಯೇ ; ಹಾಗಿದ್ದಲ್ಲಿ, ಲಭ್ಯವಿರುವ ದಾಖಲೆಗಳ ಪ್ರಕಾರ ಈವರೆಗೂ ಹಾಜರಾಗದೇ ಇರುವ ಕಿರಿಯ ತರಬೇತಿ ಅಧಿಕಾರಿಗಳು ಎಷ್ಟು ಮತ್ತು ಇವರ ಬಗ್ಗೆ ಕೈಗೊಂಡ ಕ್ರಮಗಳೇನು ; (ವಿವರಗಳನ್ನು ಒದಗಿಸುವುದು)

(ಆ) ೨೦೧೬ನೇ ಜನವರಿ ತಿಂಗಳಲ್ಲಿ ನಡೆಸಲಾದ ಅಖಿಲ ಭಾರತ ವೃತ್ತಿ ಪರೀಕ್ಷೆ (ಸಿ.ಟಿ.ಎಸ್-ಸೆಮಿಸ್ಟರ್)ಗೆ ಸಂಬಂಧಿಸಿದಂತೆ ಪ್ರಾಯೋಗಿಕ ಪರೀಕ್ಷೆಗೆ ಕೇಂದ್ರ ಕಛೇರಿಯಿಂದ ೧೩೨೮ ಕಿರಿಯ ತರಬೇತಿ ಅಧಿಕಾರಿಗಳನ್ನು ಪ್ರಾಯೋಗಿಕ ಪರೀಕ್ಷಕರನ್ನಾಗಿ ನೇಮಿಸಲಾಗಿತ್ತು. ಇದರಲ್ಲಿ ಎಷ್ಟು ಕಿರಿಯ ತರಬೇತಿ ಅಧಿಕಾರಿಗಳು ಪ್ರಾಯೋಗಿಕ ಪರೀಕ್ಷಕರನ್ನಾಗಿ ಹಾಜರಾಗಿದ್ದರು ; (ಪರೀಕ್ಷಾ ಕೇಂದ್ರವಾರು ಹಾಜರಾತಿ ವಿವರಗಳನ್ನು ನೀಡುವುದು)

(ಇ) ಪ್ರಾಯೋಗಿಕ ಪರೀಕ್ಷೆಗೆ ಪರೀಕ್ಷಕರಾಗಿ ಹಾಜರಾಗದೇ ಇರುವ ಕಿರಿಯ ತರಬೇತಿ ಅಧಿಕಾರಿಗಳ ಸಂಖ್ಯೆ ಎಷ್ಟು ; ಪರೀಕ್ಷಾ ಕೇಂದ್ರವಾರು ಇವರ ಹೆಸರು, ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ವಿವರ ನೀಡುವುದು ;

(ಈ) ಹಾಜರಾಗದೇ ಇರುವ ಕಿರಿಯ ತರಬೇತಿ ಅಧಿಕಾರಿಗಳ ವಿರುದ್ಧ ಇಲಾಖೆಯು ಕೈಗೊಂಡಿರುವ ಕ್ರಮಗಳೇನು ? (ದಾಖಲೆಗಳೊಂದಿಗೆ ವಿವರಗಳನ್ನು ನೀಡುವುದು)

## ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾರಂಭದ ಕುರಿತು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-**

೬೦೮(೭೨೨)ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರ ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರವನ್ನು ಯಾವಾಗ ರಚಿಸಿ ಆದೇಶ ಹೊರಡಿಸಿದೆ ; ಪ್ರಸ್ತುತ ಈ ಅಭಿವೃದ್ಧಿ ಪ್ರಾಧಿಕಾರವು ಕಾರ್ಯಾರಂಭಗೊಂಡಿದೆಯೇ ; ಹಾಗಿದ್ದಲ್ಲಿ, ಪ್ರಾಧಿಕಾರಕ್ಕೆ ನೇಮಿಸಿದ ತಜ್ಞರು ಹಾಗೂ ಅಧಿಕಾರೇತರ ಸದಸ್ಯರುಗಳು ಯಾರು ; (ವಿವರಗಳನ್ನು ಒದಗಿಸುವುದು)

(ಆ) ೨೦೧೨-೧೩ನೇ ಸಾಲಿನಲ್ಲಿ ಸರ್ಕಾರ ೨.೦೦ ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ತೀರ್ಮಾನಿಸಿದ್ದು ನಿಜವೇ ; ಹಾಗಿದ್ದಲ್ಲಿ, ಅದರ ಬೆಳವಣಿಗೆ ಏನು ;

(ಇ) ಪ್ರಾಧಿಕಾರ ಪ್ರಾರಂಭಗೊಂಡ ನಂತರದಲ್ಲಿ ಈವರೆಗೆ ಜರುಗಿಸಿದ ಅಭಿವೃದ್ಧಿ ಕಾರ್ಯಗಳು ಯಾವುವು ; ಹಾಗೂ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಒಟ್ಟು ಹಣವೆಷ್ಟು ;

(ಈ) ಪ್ರಾಧಿಕಾರಕ್ಕೆ ಈವರೆಗೆ ಆಯುಕ್ತರು ಹಾಗೂ ಸಿಬ್ಬಂದಿಗಳ ನಿಯೋಜನೆಯಾಗದಿರುವುದು ನಿಜವೇ ;

(ಉ) ಹಾಗಿದ್ದಲ್ಲಿ, ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರವನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುವುದೇ ?

## ಕೆರೆಗಳ ಹೂಳು ತೆಗೆಯುವ ಬಗ್ಗೆ

**ಶ್ರೀ ಬಸವನಗೌಡ ಆರ್. ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೦೯ (೭೦೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಕೆರೆಗಳು ಎಷ್ಟು ;

(ಆ) ಆ ಪೈಕಿ ಎಷ್ಟು ಕೆರೆಗಳ ಹೂಳನ್ನು ತೆಗೆಯಲಾಗಿದೆ ;

(ಇ) ಸದರಿ ಹೂಳನ್ನು ರೈತರು ತಮ್ಮ ಹೊಲಕ್ಕೆ ಸಾಗಿಸಲು ಮುಕ್ತ ಅನುಮತಿ ನೀಡಲಾಗಿದೆಯೇ ; (ವಿವರ ನೀಡುವುದು)

(ಈ) ವಿಜಯಪುರ ತಾಲ್ಲೂಕಿನ ಐತಿಹಾಸಿಕ ಪುರಾತನ ಕುಮಟಗಿ ಕೆರೆಯ ಹೂಳನ್ನು ತೆಗೆಯಲು ಅನುಮತಿ ನೀಡಲಾಗಿದೆಯೇ ;

(ಉ) ಕೆರೆಯ ಹೂಳನ್ನು ತೆಗೆಯಲು ಸರ್ಕಾರದ ಸ್ಪಷ್ಟ ನಿರ್ದೇಶನಗಳೇನು ?

## ತುಂಗಭದ್ರ ಅಣೆಕಟ್ಟಿನ ಕುರಿತು

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೬೧೦ (೭೬೭) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಂಗಭದ್ರ ಅಣೆಕಟ್ಟಿನಲ್ಲಿರುವ ನೀರಿನ ಸಾಮರ್ಥ್ಯ ಕಡಿಮೆ ಆಗಿರುವುದರಿಂದ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಆ) ಟಿ.ಬಿ.ಪಿ (Thungha Bhadra Project) ನಲ್ಲಿ ತುಂಬಿರುವ ಹೂಳು ತೆಗೆಯುವುದು ಅಥವಾ ಪರ್ಯಾಯ ಯೋಜನೆಗಳನ್ನು ತಯಾರಿಸಲು ತೆರೆದಿರುವ ಗ್ಲೋಬಲ್ ಟೆಂಡರ್ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ರಾಯಚೂರು ನಗರ ಹಾಗೂ ಸುತ್ತಲಿನ ೬೦ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ NRBC 106 ಮೈಲಿನಿಂದ ಲಿಂಕ್ ಕ್ಯಾನೆಲ್‌ನ ಗಣೇಕಲ್ ಸಮತೋಲನ ಜಲಾಶಯಕ್ಕೆ ಸೇರಿಸುವ ಪ್ರಸ್ತಾವನೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ತುಂಗಭಧ್ರಾ ಅಚ್ಚುಕಟ್ಟಿನಲ್ಲಿ ಬರುವ ಕಾಲುವೆಗಳ ಸರ್ವಿಸ್ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) NRBC ಕ್ಯಾನಲ್ ೧೬೨ ಮೈಲ್‌ವರೆಗೂ ಕಾಲುವೆ ನಿರ್ಮಾಣ ಮಾಡಲು ತೆಗೆದುಕೊಳ್ಳುವ ಕಾಲಮಿತಿ ಅವಧಿ ಎಷ್ಟು ?

## ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸುವ ಬಗ್ಗೆ

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೬೧೧ (೭೭೧) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ೩೭೧ (J) ಕಲಂ ಪ್ರಕಾರ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿರುವ ಅರಣ್ಯ ಭೂಮಿ ಕುರಿತು

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೬೧೨ (೭೬೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಭೂಮಿ ಎಷ್ಟು ;

(ಆ) ಜಿಲ್ಲೆಯಲ್ಲಿ ಇಲ್ಲಿವರೇಗೂ ಎಷ್ಟು ಎಕರೆ ಪ್ರದೇಶಗಳಲ್ಲಿ ಅರಣ್ಯ ಬೆಳೆಸಲಾಗಿದೆ ;

(ಇ) ಖಾಲಿ ಇರುವ ಅರಣ್ಯ ಭೂಮಿ ಎಷ್ಟು; ಖಾಲಿ ಇರುವ ಪ್ರದೇಶಗಳಲ್ಲಿ ಅರಣ್ಯೀಕರಣ ಯೋಜನೆಗಳಿಗೆ ಸರ್ಕಾರ ಯಾವುದಾದರು ಕ್ರಮ ಕೈಗೊಂಡಿದೆಯೇ ?

## ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಕೆರೆಗಳ ಅಭಿವೃದ್ಧಿ ಬಗ್ಗೆ

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೬೧೩ (೭೭೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಯಚೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾತಿ ಮಾಡಿರುವ ಯೋಜನೆಗಳಾವುವು ; (ವಿವರ ನೀಡುವುದು)

(ಆ) ಮಾನ್ವಿ, ರಾಯಚೂರು, ತಾಲ್ಲೂಕುಗಳಲ್ಲಿರುವ ಕೆರೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕೆರೆ ಸಂರಕ್ಷಣಾ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ರಾಯಚೂರು ನಗರದಲ್ಲಿರುವ ಮಾವಿನಕೆರೆ ಅಭಿವೃದ್ಧಿ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಯಚೂರು ಜಿಲ್ಲೆ, ಮಾನ್ವಿ ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವ ಕುರಿತು

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–**

೬೧೪ (೭೬೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಾನ್ವಿ ಪಟ್ಟಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮಿನಿ ವಿಧಾನಸೌಧದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು ;

(ಆ) ಈ ಪ್ರಸ್ತಾವನೆ ಎಷ್ಟು ವರ್ಷದಿಂದ ಸರ್ಕಾರದ ಪರಿಶೀಲನೆಯಲ್ಲಿದೆ ;

(ಇ) ಮಿನಿ ವಿಧಾನಸೌಧ ಮಂಜೂರಾತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ರಾಯಚೂರು ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಾಗಳು, ಗೊಲ್ಲರಹಟ್ಟಿ, ಕ್ಯಾಂಪ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಉ) ರಾಯಚೂರು ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಪರಿವರ್ತಿಸಲು ಸರ್ಕಾರಕ್ಕೆ ವರದಿ ಬಂದಿದೆ ; ವರದಿ ಬಂದಿದ್ದಲ್ಲಿ, ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಗೋಮಾಳ ಪ್ರದೇಶದ ಒತ್ತುವರಿ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೧೫ (೭೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಗೋಮಾಳ ಪ್ರದೇಶದ ವಿಸ್ತೀರ್ಣ ಎಷ್ಟು ; ಅದರಲ್ಲಿ ಒತ್ತುವರಿಯಾಗಿರುವ ಜಾಗವೆಷ್ಟು ;

(ಆ) ಗೋಮಾಳ ಪ್ರದೇಶಗಳಿಂದ ರೈತಾಪಿ ವರ್ಗದವರಿಗೆ, ಕೃಷಿಗೆ ಬಳಸುವ ಜಾನುವಾರುಗಳಿಗೆ ಅನುಕೂಲವಾಗುವುದರಿಂದ ಇದರ ದುರುಪಯೋಗವಾಗದಂತೆ ರಕ್ಷಣೆ ಮಾಡಲು ಸರ್ಕಾರ ಯಾವ ರೀತಿಯ ಕ್ರಮಕೈಗೊಂಡಿದೆ ;

(ಇ) ಒತ್ತುವರಿ ಮಾಡಿಕೊಂಡವರ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ? (ಕಳೆದ ೩ ವರ್ಷಗಳ ವಿವರ ನೀಡುವುದು)

## ವಿಫಲವಾದ ತೆರೆದ ಕೊಳವೆ ಬಾವಿಗಳು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೧೬ (೭೪೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿಫಲವಾದ ತೆರೆದ ಕೊಳವೆ ಬಾವಿಗಳಿಗೆ ಬಿದ್ದು ಮೃತಪಟ್ಟ ಮಕ್ಕಳ ಸಂಖ್ಯೆ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಆ) ವಿಫಲವಾದ ತೆರೆದ ಕೊಳವೆ ಬಾವಿಗಳನ್ನು ಮುಚ್ಚದ ಮಾಲೀಕರುಗಳ ಮೇಲೆ ಸರ್ಕಾರ ಯಾವ ರೀತಿಯ ಕ್ರಮಕೈಗೊಂಡಿದೆ ;

(ಇ) ಕೊಳವೆ ಬಾವಿಗಳಲ್ಲಿ ಬಿದ್ದವರನ್ನು ರಕ್ಷಿಸಲು ಕಳೆದ ೩ ವರ್ಷಗಳಲ್ಲಿ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ ;

(ಈ) ಮಾಲೀಕರ ನಿರ್ಲಕ್ಷ್ಯದಿಂದ ಈ ರೀತಿಯ ಅನಾಹುತಗಳಾಗುತ್ತಿರುವುದರಿಂದ ಕೊಳವೆ ಬಾವಿಗೆ ಬಿದ್ದವರನ್ನು ರಕ್ಷಿಸಲು ತಗಲುವ ವೆಚ್ಚವನ್ನು ಮಾಲೀಕರಿಂದ ವಸೂಲು ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ ಮತ್ತು ಶಿಕ್ಷಿಸಲು ಕ್ರಮ ಕೈಗೊಳ್ಳಲಾಗಿದೆಯೇ ?

## ಖಾಸಗಿ ಉದ್ಯಮದ ಕಾರ್ಮಿಕರು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೧೭ (೭೩೯) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಖಾಸಗಿ ಉದ್ಯಮಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಯಾವ ಯಾವ ಸೌಲಭ್ಯಗಳನ್ನು ಮಾಲೀಕರು ನೀಡಬೇಕೆಂದು ಸರ್ಕಾರ ತಿಳಿಸಿದೆ ;

(ಆ) ನಿಗಧಿತ ಅವಧಿಗಿಂತ ಹೆಚ್ಚು ಕಾಲ ದುಡಿಸಿಕೊಳ್ಳುತ್ತಿರುವ ಮತ್ತು ಸೌಲಭ್ಯಗಳನ್ನು ನೀಡದೆ ಶೋಷಣೆ ಮಾಡುತ್ತಿರುವ ಎಷ್ಟು ಪ್ರಕರಣಗಳನ್ನು ಇಲಾಖೆ ಪತ್ತೆ ಹಚ್ಚಿವೆ ; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಸಿದ್ದ ಉಡುಪು ತಯಾರಿಕಾ ಕಾರ್ಖಾನೆಗಳಲ್ಲಿ (ಗಾರ್ಮೆಂಟ್ಸ್) ಕೆಲಸ ಮಾಡುತ್ತಿರುವ ಮಹಿಳಾ ನೌಕರರಿಗೆ ಮಾಲೀಕರು ಕಿರುಕುಳ ನೀಡಿ ಮಾನಸಿಕ ಹಿಂಸೆಗೆ ಗುರಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇಂಥ ಎಷ್ಟು ಪ್ರಕರಣಗಳನ್ನು ಇಲಾಖಾಧಿಕಾರಿಗಳು ತನಿಖೆ ನಡೆಸಿ ಪತ್ತೆ ಮಾಡಲಾಗಿದೆ ; ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಅಕ್ರಮ ಮರಗಳ ಕಡಿತಲೆಯಿಂದ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ಹಾನಿಯಾಗುತ್ತಿರುವ ಬಗ್ಗೆ

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೧೮ (೭೯೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೆನರಾ ವೃತ್ತದ ಯಲ್ಲಾಪೂರ ವಿಭಾಗದ ಮುಂಡಗೋಡ ವಲಯದ ಕ್ಯಾತ್ನಳ್ಳಿ ವಿಭಾಗದ ಗೋದ್ನಾಳ ಬಳಿ ಕಂಪಾರ್ಟ್‌ಮೆಂಟ್ ೨೩/ ೧೩ ರಲ್ಲಿ ಬೃಹತ್ ಗಾತ್ರದ ಲಕ್ಷಾಂತರ ರೂಪಾಯಿ ಬೆಲೆ ಬಾಳುವ

ಹಸಿ ಸಾಗವಾನಿ ಮರಗಳನ್ನು ಅರಣ್ಯಗಳ್ಳರು ಸಾಗಿಸಿದ ಘಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಲ್ಲಿಯವರೆಗೆ ಯಾವೊಬ್ಬ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳದೇ ಇರಲು ಕಾರಣಗಳೇನು ; (ವಿವರ ನೀಡುವುದು)

(ಆ) ಸದರಿ ವಲಯದಲ್ಲಿ ಬಹಳಷ್ಟು ಅಕ್ರಮ ಕಡಿತಲೆ ಆಗಿದ್ದರೂ ಕೂಡಾ ಅಲ್ಲಿನ ಅಧಿಕಾರಿಗಳ ಮೇಲೆ ಯಾವುದೇ ಕ್ರಮಕೈಗೊಳ್ಳದೇ ಇರುವುದರಿಂದ ಅರಣ್ಯ ಲೂಟಿಗಾರರ ಜೊತೆ ಸಂಬಂಧಿಸಿದ ಅಧಿಕಾರಿಗಳು ಶಾಮೀಲಾಗಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಕಳೆದ ೫ ವರ್ಷದಿಂದ ಇಲ್ಲಿಯವರೆಗೆ ಮುಂಡಗೋಡ ವಲಯದಲ್ಲಿ ಗುನ್ನಾ ವರದಿಯನ್ವಯ ವಿವಿಧ ಜಾತಿಯ ಮರಗಳನ್ನು ಅಕ್ರಮ ಕಡಿತಲೆ ಆಗಿರುವುದು ನಿಜವೇ ; ಹಾಗಿದ್ದಲ್ಲಿ, ಗುನ್ನಾ ವರದಿಯಲ್ಲಿನ ಶಿಫಾರಸ್ಸುಗಳೇನು ? (ವಿವರ ನೀಡುವುದು)

## ಜಲಾಶಯದ ಮಣ್ಣನ್ನು ಅಕ್ರಮವಾಗಿ ತೆಗೆದು ಸಾಗಿಸುತ್ತಿರುವ ಬಗ್ಗೆ

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೧೯ (೭೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರವಾರ ಜಿಲ್ಲಾ, ಮುಂಡಗೋಡ ತಾಲ್ಲೂಕಿನ ಸನವಳ್ಳಿ ಜಲಾಶಯದ ಅಂಚಿನಲ್ಲಿರುವ ಮಣ್ಣನ್ನು ತೆಗೆದರೆ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯ ಹೆಚ್ಚುತ್ತದೆ ಎಂದು ಹಳ್ಳಿಯ ಜನರಲ್ಲಿ ತಪ್ಪು ಕಲ್ಪನೆ ಮೂಡಿಸಿ ಅರಣ್ಯದಲ್ಲಿ ಮಣ್ಣನ್ನು ಅಕ್ರಮವಾಗಿ ಸಾಗಿಸಿ ಮಾರಾಟ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಜಲಾಶಯದ ಸಾಮರ್ಥ್ಯ ಹೆಚ್ಚಿಸಲು ಅರಣ್ಯ ಇಲಾಖೆಯಿಂದ ೫೯ ಎಕರೆ ಭೂಮಿ ಪಡೆದುಕೊಳ್ಳಲಾಗಿದೆಯೆಂದು ಸಣ್ಣ ನೀರಾವರಿ ಇಲಾಖೆ ಸಿಬ್ಬಂದಿ ಹೇಳುತ್ತಿದ್ದು, ಆದರೆ ಈ ಬಗೆಗಿನ ಯಾವುದೇ ಆದೇಶ ಪತ್ರಗಳು ಅವರ ಬಳಿ ಇರುವುದಿಲ್ಲ, ಅಲ್ಲಿ ದೊಡ್ಡ ಪ್ರಮಾಣದಲ್ಲಿ ಅಗೆದ ಮಣ್ಣಿಗೆ ಶುಲ್ಕ ವಸೂಲಿ ಮಾಡಲಾಗಿದೆ ಎಂಬ ದೂರು ಕೂಡ ಇರುತ್ತದೆ. ಆದರೆ ಆ ಹಣ ಎಲ್ಲಿ ಜಮೆಯಾಗಿದೆ ಎಂಬ ಮಾಹಿತಿಯೂ ಇರುವುದಿಲ್ಲ. ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಮಣ್ಣು ತೆಗೆಯುವ ಕಾಮಗಾರಿಗೆ ಅರಣ್ಯ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆ ಸಿಬ್ಬಂದಿ ಸಂಬಂಧಿಸಿದ ಗುತ್ತಿಗೆದಾರರೊಂದಿಗೆ ಶಾಮೀಲಾಗಿರುವ ಬಗ್ಗೆ ಯಾವ ಕ್ರಮಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಅರಣ್ಯದಲ್ಲಿ ಬಿದ್ದಿರುವ ಒಣ ಮರಗಳನ್ನು ಡಿಪೋಗೆ ಸಾಗಿಸಲು ಅನುಮತಿ

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೨೦ (೭೯೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾಂಡೇಲಿ/ಅಣಶಿ ವನ್ಯಜೀವಿ ವಿಭಾದಲ್ಲಿ ಅರಣ್ಯ ಇಲಾಖೆಯಿಂದ ಒಣ ಮತ್ತು ಸತ್ತುಬಿದ್ದ ಗಿಡಗಳನ್ನು ಡಿಪೋಗೆ ಸಾಗಿಸುವ ಕಾಮಗಾರಿ ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಸದರಿ ಕಾಮಗಾರಿ ಸ್ಥಗಿತಗೊಳಿಸಿರುವುದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುವುದಲ್ಲದೇ ; ಸದರಿ ಗಿಡ ಮರಗಳು ಒಣಗಿ ಬಿದ್ದಿರುವುದರಿಂದ ಬೇಸಿಗೆಯಲ್ಲಿ ಬೆಂಕಿ ಬಿದ್ದು ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿರುವುದರಿಂದ ಇದನ್ನು ಡಿಪೋಗೆ ಸಾಗಿಸಲು ಸರ್ಕಾರ ಪರವಾನಿಗೆ ಕೊಡಲು ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಐ.ಟಿ.ಐ ಕಾಲೇಜಿನಲ್ಲಿ ವಿವಿಧ ಪಿಠೋಪಕರಣ ಖರೀದಿಯಲ್ಲಿ ಅವ್ಯವಹಾರ ಬಗ್ಗೆ

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೨೧ (೭೯೭) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೫ ವರ್ಷಗಳಿಂದ ಕಾರವಾರ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿರುವ ಐ.ಟಿ.ಐ ಕಾಲೇಜುಗಳಿಗೆ ಖರೀದಿಸಿರುವ ಸಲಕರಣೆಗಳಲ್ಲಿ ಅವ್ಯವಹಾರ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಸದರಿ ಸಲಕರಣೆಗಳನ್ನು ನಿಯಮಾನುಸಾರ ಯಾವ ಏಜನ್ಸಿ ಮುಖಾಂತರ ಖರೀದಿ ಮಾಡಲಾಗಿದೆ ಹಾಗೂ ಖರೀದಿ ಮಾಡಲು ಇರುವ ನಿಯಮದ ಮಾಹಿತಿ ಹಾಗೂ ಖರೀದಿಸಿರುವ ಸಲಕರಣೆಗಳ ಮೊತ್ತ ಖರೀದಿದಾರರ ವಿವರ ನೀಡುವುದು ;

(ಇ) ಐ.ಟಿ.ಐ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾಗಿರುವ (ಲ್ಯಾಬ್) ಪ್ರ್ಯಾಕ್ಟಿಕಲ್ ಕುರಿತಾದ ಸಲಕರಣೆಗಳನ್ನು ಕಳೆದ ೧೦ ವರ್ಷಗಳಲ್ಲಿ ನಿಯಮದಂತೆ ಖರೀದಿಸಿರುತ್ತಾರೆಯೇ ; ಯಾವ

ಯಾವ ಏಜೆನ್ಸಿ ಮುಖಾಂತರ ಖರೀದಿಸಿರುತ್ತಾರೆ ; ಅವರು ನೀಡಿರುವ ದರಪಟ್ಟಿ ಹಾಗೂ ಖರೀದಿಸಿದ ರಶೀದಿಯ ಸಮೇತ ವಿವರ ನೀಡುವುದು ? (ವರ್ಷವಾರು)

## ಸರಳ ಒಲೆ ಹಂಚಿಕೆಯಲ್ಲಿನ ಅವ್ಯವಹಾರ ಕುರಿತು

**ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೨೨ (೭೯೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಹಳಿಯಾಳ ತಾಲ್ಲೂಕಿನಲ್ಲಿ ೨೦೧೨–೧೩ ನೇ ಸಾಲಿನಿಂದ ೨೦೧೫–೧೬ ನೇ ಸಾಲಿನವರೆಗೆ ಗ್ರಾಮ ಅರಣ್ಯ ಸಮಿತಿಯಿಂದ ಸರಳ ಒಲೆ ಖರೀದಿಸಿ ಎಷ್ಟು ಮಂದಿ ಫಲಾನುಭವಿಗಳಿಗೆ ನೀಡಲಾಗಿದೆ ; ಫಲಾನುಭವಿವಾರು ವಿಳಾಸ ಸಹಿತ ದಾಖಲಾತಿಗಳೊಂದಿಗೆ ವಿವರ ನೀಡುವುದು ;

(ಆ) ಸದರಿ ಸರಳ ಒಲೆ ಪೂರೈಕೆ ಮಾಡಲು ಯಾವಾಗ ಟೆಂಡರ್ ಕರೆಯಲಾಗಿದೆ; ಪತ್ರಿಕಾ ವರದಿ ಹಾಗೂ ಟೆಂಡರ್‌ನಲ್ಲಿ ಭಾಗವಹಿಸಿದ್ದವರ ವಿವರ ನೀಡುವುದು ;

(ಇ) ಸದರಿ ಸರಳ ಒಲೆಯನ್ನು ಯಾವ ಗುತ್ತಿಗೆದಾರರು ಪೂರೈಕೆ ಮಾಡಿರುತ್ತಾರೆ ಹಾಗೂ ಅವರಿಗೆ ಯಾವ ಶೀರ್ಷಿಕೆ ಅಡಿಯಲ್ಲಿ ಅನುದಾನ ನೀಡಲಾಗಿದೆ ; (ಪ್ರತಿಯೊಂದು ಸರಳ ಒಲೆಯ ದರದೊಂದಿಗೆ ವಿವರ ನೀಡುವುದು)

(ಈ) ಸದರಿ ಸರಳ ಒಲೆ ಪೂರೈಕೆಯಲ್ಲಿ ಅಲೋರ ಹಾಗೂ ತತ್ವಣಗಿ ಗ್ರಾಮಗಳಲ್ಲಿ ಅವ್ಯವಹಾರ ನಡೆದಿದೆಯೇ ; ಸದರಿ ಗ್ರಾಮಗಳಲ್ಲಿ ಫಲಾನುಭವಿಗಳಿಗೆ ನೀಡಿರುವ ದಾಖಲಾತಿಗಳೊಂದಿಗೆ ವಿವರ ನೀಡುವುದು ?

## ಕಸ್ತೂರಿ ರಂಗನ್ ವರದಿಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೬೨೩ (೭೩೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಸ್ತೂರಿ ರಂಗನ್ ವರದಿಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆಯೇ ; ಇಲ್ಲದೇ ಇದ್ದಲ್ಲಿ, ಯಾವ ಹಂತದಲ್ಲಿದೆ ; ತಿರಸ್ಕರಿಸುವಂತೆ ರಾಜ್ಯದ ಆಕ್ಷೇಪಣೆಗಳಾವುವು ;

(ಆ) ಡೀಮ್ಡ್ ಫಾರೆಸ್ಟ್ ಪ್ರದೇಶದಲ್ಲಿ ವಾಸವಾಗಿರುವ ಕುಟುಂಬಗಳಿಗೆ ಭೂಮಿ ಹಕ್ಕನ್ನು ನೀಡುವ ಬಗ್ಗೆ ಇಲಾಖೆ ಕ್ರಮ ಕೈಗೊಂಡಿದೆಯೇ ; ರಾಜ್ಯದಲ್ಲಿ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವವರ ಅರ್ಜಿಗಳ ಸಂಖ್ಯೆ ಎಷ್ಟು ;

(ಇ) ಡೀಮ್ಡ್ ಫಾರೆಸ್ಟ್ ಎಂದು ಗುರುತಿಸಿ ಘೋಷಿಸಲು ಇಲಾಖೆ ಯಾವ ಮಾನದಂಡಗಳನ್ನು ಅನುಸರಿಸುತ್ತದೆ ;

(ಈ) ರಕ್ಷಿತ ಅರಣ್ಯಕ್ಕೂ ಡೀಮ್ಡ್ ಫಾರೆಸ್ಟ್‌ಗೆ ಇರುವ ವ್ಯತ್ಯಾಸವೇನು ; ಎರಡು ಪ್ರದೇಶದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ರಸ್ತೆ, ಮನೆ ಜನಹಿತದ ಯೋಜನೆಯನ್ನು ಕೈಗೊಳ್ಳಲು ಅಧಿಕಾರ ಇದೆಯೇ ? (ವಿವರ ನೀಡುವುದು)

## ಬೀಡಿ ಕಾರ್ಮಿಕರ ಜೀವನ ಸ್ಥಿತಿಗತಿಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೬೨೪ (೭೩೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಬೀಡಿ ಕಾರ್ಮಿಕರ ಜೀವನ ಸ್ಥಿತಿಗತಿಗಳನ್ನು ಅಭ್ಯಸಿಸಿ ಉದ್ಯೋಗ ಕಳೆದುಕೊಳ್ಳುವ ಭೀತಿಯಲ್ಲಿರುವವರಿಗೆ ಬೇರೆ ಉದ್ಯೋಗವನ್ನು ದೊರಕಿಸುವ ಬಗ್ಗೆ ಇಲಾಖೆ ಕ್ರಮ ಕೈಗೊಂಡಿದೆಯೇ ;

(ಇ) ರಾಜ್ಯ ಸರ್ಕಾರ ಅಸಂಘಟಿತ ಕಾರ್ಮಿಕರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತದೆ ;

(ಈ) ಕೇಂದ್ರ ಸರ್ಕಾರ ಅಸಂಘಟಿತ ಕಾರ್ಮಿಕರಿಗೆ ನೀಡುವ ಯೋಜನೆಗಳಾವುವು ; ರಾಜ್ಯದಲ್ಲಿರುವ ಒಟ್ಟು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು ; ಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು ?

## ರಾಜ್ಯದಲ್ಲಿ ಕಾರ್ಮಿಕರಿಗಾಗಿ ಇರುವ ನೀತಿಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೬೨೫ (೭೩೩) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಮಿಕರಿಗಾಗಿ ಇರುವ ನೀತಿಯೇನು ; ರಾಜ್ಯದಲ್ಲಿರುವ ಕಾರ್ಮಿಕರಿಗೆ ರಾಜ್ಯ ಕಾರ್ಮಿಕರ ಇಲಾಖೆಯಿಂದ ಎಷ್ಟು ಹಣವನ್ನು ಅವರ ಅಭ್ಯುದಯಕ್ಕಾಗಿ ಖರ್ಚು ಮಾಡಲಾಗುತ್ತದೆ ;

(ಆ) ರಾಜ್ಯ ಸರ್ಕಾರವು ಕಾರ್ಮಿಕರಿಗೆ ಯಾವ ಯಾವ ಯೋಜನೆಗಳನ್ನು ಜಾರಿಗೆ ತಂದಿದೆ ; ಇದರಲ್ಲಿ ಭಾಗಿಯಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟು ;

(ಇ) ಬೀಡಿ ಕಾರ್ಮಿಕರಿಗೆ ತುಟ್ಟಿಭತ್ಯೆ ಏರಿಕೆಯನ್ನು ಇಲಾಖೆ ರದ್ದುಪಡಿಸಲು ಕಾರಣವೇನು ; (ವಿವರ ನೀಡುವುದು)

(ಈ) ಅಸಂಘಟಿತ ಕಾರ್ಮಿಕರ ಬಗ್ಗೆ ರಾಜ್ಯ ಸರ್ಕಾರದ ನೀತಿಯೇನು ?

## ರಾಜ್ಯದಲ್ಲಿ ಕಡತ ವಿಲೇವಾರಿ ಮಾಡುವ ಯೋಜನೆಯ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೬೨೬ (೭೩೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಡತ ವಿಲೇವಾರಿ ಮಾಡುವ ಯೋಜನೆ ಚಾಲ್ತಿಯಲ್ಲಿದೆಯೇ ; ಪ್ರಸ್ತುತ ರಾಜ್ಯದಲ್ಲಿ ೨೦೧೫–೧೬ನೇ ಸಾಲಿಗೆ ಬಾಕಿ ಇರುವ ಕಡತಗಳೆಷ್ಟು ; ವಿಲೇವಾರಿ ಮಾಡಿದ ಕಡತಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಡ್ಡಾಯವಾಗಿ ಕಡತ ವಿಲೇವಾರಿ ಮಾಡಲು ಮತ್ತು ಕಡತಗಳನ್ನು ಬಾಕಿ ಇಡದಂತೆ ಇಲಾಖೆ ಸುತ್ತೋಲೆ ನೀಡಿದೆಯೇ ; ಇದರಿಂದ ಉಂಟಾದ ಪ್ರಯೋಜನವೇನು ;

(ಇ) ಬರಗಾಲದಲ್ಲಿ ತತ್ತರಿಸಿದ ತಾಲ್ಲೂಕುಗಳಲ್ಲಿ ಇಲಾಖೆ ಖರ್ಚು ಮಾಡಿದ ಹಣವೆಷ್ಟು ; ಕೇಂದ್ರ ಸರ್ಕಾರದ ಪಾಲು ಎಷ್ಟು ;

(ಈ) ಕರ್ನಾಟಕ ಭೂ ಕಂದಾಯ ಕಾಯ್ದೆ (ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್) ಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿ ಕಛೇರಿ, ಉಪವಿಭಾಗಧಿಕಾರಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಇತ್ಯರ್ಥಪಡಿಸಲು ೨೦೧೩–೧೪ ರಿಂದ ೨೦೧೫–೧೬ರಲ್ಲಿ ಎಷ್ಟು ಪ್ರಕರಣಗಳು ಬಾಕಿ ಇದೆ ; ಈ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ವಿಶೇಷ ಅಧಿಕಾರಿಗಳನ್ನು ನೇಮಕ ಮಾಡುವ ಪ್ರಸ್ತಾವನೆ ಇದೆಯೇ ? (ವಿವರ ನೀಡುವುದು)

## ಆನೆಗಳ ಹಾವಳಿಯಿಂದ ರಾಜ್ಯದಲ್ಲಿ ಉಂಟಾದ ಕೃಷಿ ನಷ್ಟಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೬೨೭ (೭೩೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆನೆಗಳ ಹಾವಳಿಯಿಂದ ರಾಜ್ಯದಲ್ಲಿ ಉಂಟಾದ ಕೃಷಿ ನಷ್ಟ ಎಷ್ಟು ; ಸತ್ತವರ ಸಂಖ್ಯೆ ಎಷ್ಟು ; ಅವರಿಗೆ ಒದಗಿಸಿದ ಪರಿಹಾರ ಎಷ್ಟು ; (ವಿವರ ಒದಗಿಸುವುದು)

(ಆ) ಆನೆಗಳ ಹಾವಳಿ ತಡೆಯಲು ಇಲಾಖೆ ತಡೆ ಬೇಲಿಯನ್ನು ರಚಿಸುವುದಾಗಿ ಘೋಷಿಸಿದ್ದರೂ, ಈ ತಡೆ ಬೇಲಿಗಳನ್ನು ರಚಿಸದೇ ಇರಲು ಕಾರಣಗಳೇನು ; ರಚಿಸಿದರೆ ಎಷ್ಟು ಕಿ.ಮೀ. ರಚಿಸಲಾಗಿದೆ ; ಯಾವ ಯಾವ ಭಾಗಗಳಲ್ಲಿ ರಚಿಸಲಾಗಿದೆ ; ತಗುಲಿದ ವೆಚ್ಚ ಎಷ್ಟು ; (ವಿವರ ನೀಡುವುದು)

(ಇ) ಅರಣ್ಯ ಇಲಾಖೆಯ ಅಧಿಕಾರಿಗಳು ವನ್ಯ ಜೀವಿಗಳ ಬಗ್ಗೆ ನಿಗಾ ವಹಿಸದೇ ಕಳ್ಳ ಭೇಟೆ ಆಡುತ್ತಿರುವ ಸಂಖ್ಯೆ ಹೆಚ್ಚಾಗಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಕಳ್ಳ ಭೇಟೆಯಲ್ಲಿ ಭಾಗಿಯಾದವರ ಬಗ್ಗೆ ಎಷ್ಟು ಕೇಸುಗಳನ್ನು ನೋಂದಾಯಿಸಲಾಗಿದೆ; ಯಾವ ಯಾವ ಉದ್ದೇಶದಿಂದ ಕೇಸುಗಳನ್ನು ದಾಖಲಿಸಲಾಗಿದೆ ; (ವಿವರಗಳನ್ನು ಒದಗಿಸುವುದು)

(ಈ) ಅರಣ್ಯ ಪ್ರದೇಶದಲ್ಲಿರುವ ಮರಗಳನ್ನು ಅಕ್ರಮವಾಗಿ ಕಡಿದು ಸಾಗಾಟ ಮಾಡುತ್ತಿರುವ ಬಗ್ಗೆ ದೂರುಗಳಿದ್ದು, ಈ ಬಗ್ಗೆ ಇಲಾಖೆ ಎಷ್ಟು ಕೇಸುಗಳನ್ನು ದಾಖಲಿಸಲಾಗಿದೆ ; ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ರೇಖಲಗೆರೆ ಫೀಡರ್ ಚಾನಲ್ ದುರಸ್ಥಿ ಬಗ್ಗೆ

**ಶ್ರೀಮತಿ ಜಯಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೨೮ (೭೨೪) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು, ರೇಖಲಗೆರೆ ಫೀಡರ್ ಚಾನಲ್ ದುರಸ್ಥಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ;

(ಆ) ಇದ್ದಲ್ಲಿ, ಈವರೆಗೆ ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಫೀಡರ್ ಚಾನಲ್‌ನಿಂದ ಎಷ್ಟು ಕೆರೆಗಳಿಗೆ ನೀರು ಒದಗಿಸಲಾಗುತ್ತಿದೆ ? (ವಿವರ ನೀಡುವುದು)

## ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಗೇರು ಕೃಷಿಗಾಗಿ ಗುತ್ತಿಗೆ ಆಧಾರದಲ್ಲಿ ನೀಡಲಾಗಿರುವ ಗೇರು ಕೃಷಿ ಜಮೀನಿನ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೭೨೯ (೭೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೧೯೫೭–೫೮ನೇ ಸಾಲಿನಲ್ಲಿ ಮತ್ತು ನಂತರದ ಅವಧಿಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ರೈತರಿಗೆ ಗೇರು ಕೃಷಿಗಾಗಿ ಎಷ್ಟು ಎಕರೆ ಜಮೀನನ್ನು ಗುತ್ತಿಗೆ ಆಧಾರದಲ್ಲಿ ನೀಡಲಾಗಿದೆ ;

(ಆ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ರೈತರು ಗೇರು ಕೃಷಿಗಾಗಿ ಎಷ್ಟು ಎಕರೆ ಜಮೀನನ್ನು ಬಳಸಿಕೊಂಡಿರುತ್ತಾರೆ ;

(ಇ) ಗುತ್ತಿಗೆ ಅವಧಿ ಪೂರೈಸಿದ ಎಷ್ಟು ರೈತರಿಗೆ ಗೇರು ಕೃಷಿ ಕೈಗೊಂಡಿರುವ ಎಷ್ಟು ಎಕರೆ ಜಮೀನನ್ನು ಪಟ್ಟಾ ಮಾಡಿ ಕೊಡಲಾಗಿದೆ ; (ವಿವರ ನೀಡುವುದು)

(ಈ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುತ್ತಿಗೆ ಅವಧಿ ಪೂರೈಸಿದ ಎಷ್ಟು ರೈತರಿಗೆ ಗೇರು ಕೃಷಿ ಭೂಮಿ ನೀಡಲು ಬಾಕಿ ಉಳಿದಿದೆ ; (ವಿವರ ನೀಡುವುದು)

(ಉ) ಗುತ್ತಿಗೆ ಗೇರು ಕೃಷಿ ಜಮೀನಿನ ಸಕ್ರಮಾತಿ ಕುರಿತಂತೆ ಸರ್ಕಾರದ ನಿಲುವೇನು ?

## ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಕಾಣಿಸಿಕೊಂಡ ಕಾಡ್ಗಿಚ್ಚು ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೬೩೦ (೭೬೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ದಿನಾಂಕ : ೦೮–೦೩–೨೦೧೬ರಂದು ಕಾಡ್ಗಿಚ್ಚು ಕಾಣಿಸಿಕೊಂಡಿದ್ದು ಎಷ್ಟು ಎಕರೆ ಅರಣ್ಯ ಪ್ರದೇಶ ಭಸ್ಮವಾಗಿದೆ ;

(ಆ) ಫೆಬ್ರವರಿ ಕೊನೆಯ ವಾರದಲ್ಲಿ ಬಂಡೀಪುರದ ಸಮೀಪದ ಮೊಳೆಯೂರು ಅರಣ್ಯ ವಲಯದಲ್ಲಿ ಕಾಣಿಸಿಕೊಂಡ ಬೆಂಕಿಗೆ ಎಷ್ಟು ಎಕರೆ ಅರಣ್ಯ ಪ್ರದೇಶ ನಾಶವಾಗಿದೆ ;

(ಇ) ಪ್ರತಿ ವರ್ಷವು ಸಾವಿರಾರು ಎಕರೆ ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗುತ್ತಿದ್ದರೂ ಇದನ್ನು ನಿಯಂತ್ರಿಸಲು ಸರ್ಕಾರ ವಿಫಲವಾಗಿರುವುದಕ್ಕೆ ಕಾರಣಗಳೇನು ;

(ಈ) ಈ ರೀತಿಯ ಅನಾಹುತಕ್ಕೆ ಅರಣ್ಯ ಇಲಾಖೆಯ ಹಿರಿಯ ಮತ್ತು ಕೆಳಹಂತದ ಅಧಿಕಾರಿಗಳಲ್ಲಿ ಸಾಮರಸ್ಯ ಇಲ್ಲದಿರುವುದೇ ಕಾರಣವಾಗಿದ್ದು ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

## ರಾಜ್ಯ ಸರ್ಕಾರದ ಅಧೀನದಲ್ಲಿರುವ ಬಂದರುಗಳಿಂದ ಬರುವ ಆದಾಯದ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೬೩೧ (೭೬೩) ಮಾನ್ಯ ಜವಳಿ ಮತ್ತು ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಅಧೀನದಲ್ಲಿ ಎಷ್ಟು ಬಂದರುಗಳು ಇವೆ ; (ವಿವರ ನೀಡುವುದು)

(ಆ) ಕಳೆದ ಎರಡು ವರ್ಷಗಳಲ್ಲಿ ಸದರಿ ಬಂದರುಗಳಿಂದ ಬಂದಿರುವ ಆದಾಯ ಎಷ್ಟು ;

(ಇ) ರಾಜ್ಯದ ಏಕೈಕ ಸರ್ವಋತು ಬಂದರಾದ ನವ ಮಂಗಳೂರು ಬಂದರನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿ ರಾಜ್ಯಕ್ಕೆ ಹೆಚ್ಚು ಆದಾಯ ತರುವಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಈ) ರಾಜ್ಯದಿಂದ ಬಂದರುಗಳ ಮೂಲಕ ನಡೆಸುತ್ತಿರುವ ವ್ಯವಹಾರಗಳಲ್ಲಿ (ಒಟ್ಟು ಪ್ರಮಾಣ ಮತ್ತು ಮೌಲ್ಯ) ರಾಜ್ಯದ ಮತ್ತು ಹೊರ ರಾಜ್ಯಗಳ ಬಂದರುಗಳ ಪ್ರಮಾಣವೆಷ್ಟು ;

(ಉ) ರಾಜ್ಯದ ರಫ್ತು ವ್ಯವಹಾರ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ಬಂದರಿನ ಮೂಲಕ ಆಗುವಂತೆ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

## ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯಿದೆಯ ರೂಪುರೇಷೆಗಳ ಬಗ್ಗೆ

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೬೩೨ (೭೬೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯಿದೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಸೂಚಿಸಿರುವುದರ ಮೇರೆಗೆ ರಾಜ್ಯ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಆ) ಈ ಕಾಯಿದೆಯ ರೂಪುರೇಷೆಗಳೇನು ; (ವಿವರ ನೀಡುವುದು)

(ಇ) ಈ ಕಾಯಿದೆ ಜಾರಿಗೆ ಬರುವುದರಿಂದ ಅರಣ್ಯ ಪ್ರದೇಶದಲ್ಲಿ ವಾಸಮಾಡುತ್ತಿರುವ ಪರಿಶಿಷ್ಠ ಪಂಗಡದವರಿಗೆ ಆಗುವ ಅನುಕೂಲತೆಗಳು ಯಾವುವು ?

## ಪೋಡಿ ಮುಕ್ತ ಎಂದು ಘೋಷಿಸಿರುವ ಗ್ರಾಮಗಳ ವಿವರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩೩ (೮೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಂದಾಯ ಇಲಾಖೆಯಲ್ಲಿ "ಪೋಡಿ ಮುಕ್ತ" ಎಂದು ಘೋಷಿಸಿರುವ ಪ್ರದೇಶಗಳಾವುವು ; (ಜಿಲ್ಲಾ ಮತ್ತು ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಪೋಡಿಗಾಗಿ ಸಲ್ಲಿಕೆಯಾಗಿರುವ ವಿಲೇವಾರಿಗೆ ಬಾಕಿಯಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾ ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಇ) ಬಾಕಿಯಿರುವ ಅರ್ಜಿಗಳ ತ್ವರಿತ ವಿಲೇವಾರಿಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ? (ವಿವರ ಒದಗಿಸುವುದು)

## ಜಿಲ್ಲಾ ಬಾಲ ಕಾರ್ಮಿಕ ನಿರ್ಮೂಲನಾ ಯೋಜನೆಯಡಿ ಮಂಜೂರಾದ ಹುದ್ದೆ ಕುರಿತು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩೪ (೮೦೧) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾರ್ಮಿಕ ಇಲಾಖೆಯಡಿ ಬರುವ ಜಿಲ್ಲಾ ಬಾಲ ಕಾರ್ಮಿಕರ ಯೋಜನೆಯಡಿ ಕಾರ್ಯ ನಿರ್ವಹಿಸುವ ಯೋಜನಾ ನಿರ್ದೇಶಕರು, ಸ್ಟೆನೋ–ಕಂ–ಅಕೌಂಟೆಂಟ್, ಕ್ಷೇತ್ರಾಧಿಕಾರಿ, ಜವಾನ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆ ಹಾಗೂ ಅರ್ಹತೆಗಳೇನು ;

(ಆ) ಯೋಜನಾ ನಿರ್ದೇಶಕರು, ಸ್ಟೆನೋ–ಕಂ–ಅಕೌಂಟೆಂಟ್, ಕ್ಷೇತ್ರಾಧಿಕಾರಿ, ಜವಾನ ಹುದ್ದೆಗೆ ನೀಡುತ್ತಿರುವ ಮಾಸಿಕ ವೇತನವೆಷ್ಟು ;

(ಇ) ಯೋಜನಾ ನಿರ್ದೇಶಕರ ಹುದ್ದೆಗೆ ಕೇಳಿದ ವಿದ್ಯಾರ್ಹತೆ ಮತ್ತು ಅನುಭವಕ್ಕೆ ತಕ್ಕಂತೆ ವೇತನ ಪಾವತಿಸಲಾಗುತ್ತಿದೆಯೇ ಮತ್ತು ವೇತನವನ್ನು ಪರಿಷ್ಕರಣೆ ಮಾಡದೇ ಎಷ್ಟು ವರ್ಷಗಳಾಗಿವೆ ; ಕಾರಣಗಳೇನು ;

(ಈ) ಸಿಬ್ಬಂದಿಗಳಿಗೆ ಪಿಎಫ್, ಇಎಸ್ಐ ಇತ್ಯಾದಿ ಸಾಮಾಜಿಕ ಭದ್ರತಾ ಯೋಜನೆಗಳನ್ನು ಒದಗಿಸಲಾಗಿದೆಯೇ ? (ವಿವರ ಒದಗಿಸುವುದು)

## ಮೀನುಗಾರಿಕೆ ಅವಗಡಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಒದಗಿಸಿರುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩೫ (೭೭೬) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೪ ವರ್ಷಗಳಲ್ಲಿ ಮೀನುಗಾರಿಕೆಯ ಸಂದರ್ಭದಲ್ಲಿ ಮೃತಪಟ್ಟ ಮೀನುಗಾರರ ಸಂಖ್ಯೆ ಎಷ್ಟು ;

(ಆ) ಮೀನುಗಾರಿಕೆ ವೇಳೆ ಮೃತ ಪಟ್ಟ ಸಂತ್ರಸ್ತರಿಗೆ ಸರ್ಕಾರದಿಂದ ಯಾವ ರೀತಿಯ ಪರಿಹಾರ ಒದಗಿಸಲಾಗುತ್ತದೆ ;

(ಇ) ಕಳೆದ ೪ ವರ್ಷಗಳಲ್ಲಿ ಮೀನುಗಾರಿಕೆ ಸಂಬಂಧ ಅವಘಡ ಹಾಗೂ ಮೃತಪಟ್ಟ ಸಂತ್ರಸ್ತರಿಗೆ ನೀಡಿದ ಪರಿಹಾರಗಳೇನು ? (ವರ್ಷವಾರು, ಜಿಲ್ಲಾವಾರು ವಿವರ ಒದಗಿಸುವುದು)

## ಆಸ್ತಿ ಮೇಲಿನ ತೆರಿಗೆ ಹೆಚ್ಚಳ ಮತ್ತು ಪರಿಷ್ಕರಣೆ ಕುರಿತು

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು):–**

೬೩೬ (೬೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಇತ್ತೀಚೆಗೆ ಪಾಲಿಕೆಗಳು ಸೇರಿದಂತೆ ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಮನೆ ಹಾಗೂ ಆಸ್ತಿಗಳ ಮೇಲೆ ವಿಧಿಸುವ ಕರ ತೆರಿಗೆಯನ್ನು ಪರಿಷ್ಕರಿಸಲು ಸರ್ಕಾರ ಮುಂದಾಗಿರುವುದು ನಿಜವೇ ;

(ಆ) ಇದಕ್ಕೆ ಕಾರಣಗಳೇನು ; ಪರಿಷ್ಕರಣೆಯ ಮಾನದಂಡಗಳೇನು ; ಈ ನಿಯಮ ಯಾವಾಗಿನಿಂದ ಜಾರಿಗೆ ಬರುತ್ತದೆ ; ಇದರ ಅಳವಡಿಕೆಯ ಮಾರ್ಗಸೂಚಿ–ನಿಯಮಗಳು ಯಾವುವು ;

(ಇ) ಸದರಿ ನಿಯಮವು ಮನೆ ಕಂದಾಯ ಸೇರಿದಂತೆ ಹೊಸ ಮನೆಗಳ ನಿರ್ಮಾಣ ಕಟ್ಟಡಗಳ ನಕ್ಷೆಗೂ ಅನ್ವಹಿಸುವುದೇ ; (ವಿವರ ಒದಗಿಸುವುದು)

(ಈ) ಏಕಕಾಲಕ್ಕೆ ಇಷ್ಟು ಮೊತ್ತದ ತೆರಿಗೆ ಏರಿಕೆಯಿಂದ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ; ತೆರಿಗೆ ಪ್ರಮಾಣ ಕಡಿಮೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು ;

(ಉ) ಹಾಗಿದ್ದಲ್ಲಿ, ಭಾರಿ ಮೊತ್ತದ ತೆರಿಗೆ ಹೆಚ್ಚಳಕ್ಕೆ ಕಾರಣಗಳೇನು ; ಈ ಹಿಂದೆ ತೆರಿಗೆ ಪರಿಷ್ಕರಣೆ ಆಗಿದ್ದು ಯಾವಾಗ ಹಾಗೂ ಎಷ್ಟು ತೆರಿಗೆ ಹೆಚ್ಚಿಸಲಾಗಿತ್ತು ? (ಪೂರ್ಣ ವಿವರ ನೀಡುವುದು)

## ಕೃಷ್ಣಾ ಕಣಿವೆ ವ್ಯಾಪ್ತಿಯಲ್ಲಿರುವ ವಿವಿಧ ಏತ ನೀರಾವರಿ ಯೋಜನೆಗಳು

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩೭ (೭೫೯) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಾ ಕಣಿವೆಯಲ್ಲಿ ಪ್ರಗತಿಯಲ್ಲಿರುವ ವಿವಿಧ ಏತ ನೀರಾವರಿ ಯೋಜನೆಗಳ ಪ್ರಸಕ್ತ ಹಂತವೇನು ; ರೈತರಿಗೆ ನೀರಿನ ಬಳಕೆ ಮಾಡಿಕೊಳ್ಳಲು ಕೈಗೊಂಡ ಸಕಾಲಿಕ ಕ್ರಮಗಳೇನು ; (ವಿವರ ನೀಡುವುದು)

(ಆ) ವಿವಿಧ ಏತ ನೀರಾವರಿ ಯೋಜನೆಗಳ ಯೋಜನಾವಾರು ಯೋಜನಾ ಮೊತ್ತ ಆರಂಭದ ವರ್ಷದಿಂದ ೨೦೧೬ರ ಜನವರಿ ಅಂತ್ಯದವರೆಗೆ ಪ್ರತಿ ಯೋಜನೆಯ ಕುರಿತು ಪ್ರಗತಿ ಏನು ; (ವಿವರ ನೀಡುವುದು)

(ಇ) ಸದರಿ ಏತ ನೀರಾವರಿ ಯೋಜನೆಗಳಿಂದ ನೀರಾವರಿಗೆ ಒಳಪಡುವ ಜಮೀನು ಎಷ್ಟು ? (ಯೋಜನಾವಾರು, ತಾಲ್ಲೂಕುವಾರು, ಗ್ರಾಮವಾರು, ಎಕರೆವಾರು ವಿವರಗಳನ್ನು ಸಮಗ್ರವಾಗಿ ನೀಡುವುದು)

## ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿಯ ಬೋಳಾರೆ ಕೆರೆ ಒತ್ತುವರಿ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩೮ (೭೬೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಒಳಪಟ್ಟಿರುವ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿಯ ಬೋಳಾರೆ ಕೆರೆಯ ಒತ್ತುವರಿಯಾಗಿರುವ ಅಚ್ಚುಕಟ್ಟು ಪ್ರದೇಶವೆಷ್ಟು ;

(ಆ) ಒತ್ತುವರಿಯಾಗಿರುವ ಅಚ್ಚುಕಟ್ಟು ಪ್ರದೇಶದ ಸರ್ವೆ ಕಾರ್ಯ ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ ;

(ಇ) ಒತ್ತುವರಿಯನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು?

## ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೩೯ (೭೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ವಿವಿಧ ವೃಂದಗಳಲ್ಲಿ ಗುರುತಿಸಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಖಾಲಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ : ೦೪-೦೩-೨೦೧೫ರ ಆದೇಶಾನುಸಾರ ಕ್ರಮ ಕೈಗೊಳ್ಳಲಾಗಿದೆಯೇ ;

(ಇ) ಕ್ರಮ ಕೈಗೊಳ್ಳದಿದ್ದಲ್ಲಿ ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆಯೇ ?

## ರಾಜ್ಯದಲ್ಲಿ ಬರಗಾಲ ನಿರ್ವಹಣೆ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೪೦ (೭೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ೧೦೦ ಕ್ಕಿಂತ ಹೆಚ್ಚು ತಾಲ್ಲೂಕುಗಳು ತೀವ್ರ ಬರಗಾಲದಿಂದ ತೊಂದರೆ ಅನುಭವಿಸುತ್ತಿದ್ದು, ಬರಗಾಲ ನಿರ್ವಹಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; ಯಾವ ಯಾವ ರೀತಿಯ ಪರಿಹಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ; ಮುಖ್ಯವಾಗಿ ಬೆಳೆ ನಾಶ ಪರಿಹಾರ, ಜಾನುವಾರಗಳ ಮೇವು ಬ್ಯಾಂಕ್, ಕುಡಿಯುವ ನೀರಿನ ನಿರ್ವಹಣೆಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ಉತ್ತರ ಕರ್ನಾಟಕದ ಯಾವ ಯಾವ ತಾಲ್ಲೂಕುಗಳು ತೀವ್ರ ಬರಗಾಲವನ್ನು ಅನುಭವಿಸುತ್ತಿದೆ ; ಅದರ ನಿರ್ವಹಣೆಗೆ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಬೆಳಗಾವಿ ಜಿಲ್ಲಾಧಿಕಾರಿಗಳ 'ತೀವ್ರ ಬರ ನಿರ್ವಹಣೆ ಸಮಿತಿ'ಯ ಕಾರ್ಯಕ್ರಮಗಳೇನು ?

## ಅಥಣಿ ತಾಲ್ಲೂಕಿನ ಬಸವೇಶ್ವರ ಏತ ನೀರಾವರಿ ಯೋಜನೆಯ ಪ್ರಗತಿ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೪೧ (೭೨೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಥಣಿ ತಾಲ್ಲೂಕಿನ ಬಸವೇಶ್ವರ ಏತ ನೀರಾವರಿ ಯೋಜನೆಯು ಅತಿ ಅವಶ್ಯಕ ನೀರಾವರಿ ಯೋಜನೆಯಾಗಿದ್ದು, ಈ ಏತ ನೀರಾವರಿ ಯೋಜನೆಯು ಇನ್ನೂ ಪ್ರಗತಿ ಕಂಡಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಯೋಜನೆ ಎಷ್ಟು ಕಾಲಮಿತಿಯಲ್ಲಿ ಸಾಕಾರಗೊಳ್ಳುವುದು ;

(ಇ) ಪ್ರಗತಿ ಕಂಡಿಲ್ಲವಾದರೆ, ಈ ಯೋಜನೆಗೆ ಇರುವ ಅಡಚಣೆಗಳೇನು ?

## ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ಎಸ್.ಸಿ.ಪಿ./ ಟಿ.ಎಸ್.ಪಿ. ಯೋಜನೆ ಅನುದಾನ ಬಳಕೆ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೪೨ (೭೨೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೫–೧೬ನೇ ಸಾಲಿನಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಆಯವ್ಯಯದಲ್ಲಿ ಕಾಯ್ದಿರಿಸಿದ ಅನುದಾನವು ಬಳಕೆಯಾಗದೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ೨೦೧೫–೧೬ನೇ ಸಾಲಿನ ಆಯವ್ಯಯದಲ್ಲಿ ಎಸ್.ಸಿ.ಪಿ/ ಟಿ.ಎಸ್.ಪಿ. ಯೋಜನೆಗೆ ಕಾಯ್ದಿರಿಸಿದ ಒಟ್ಟು ಅನುದಾನವೆಷ್ಟು; ಅದರಲ್ಲಿ ಬೆಳಗಾವಿ ಜಿಲ್ಲೆಗೆ ಹಂಚಿಕೆಯಾದ ಅನುದಾನವೆಷ್ಟು ;

(ಇ) ಬೆಳಗಾವಿ ಜಿಲ್ಲೆಗೆ ಹಂಚಿಕೆಯಾದ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು ; ಅವುಗಳಿಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ; ಆ ಪೈಕಿ ಬಳಕೆ ಮಾಡಿದ ಅನುದಾನವೆಷ್ಟು ; ಬಾಕಿ ಉಳಿದಿರುವ ಅನುದಾನವೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಕಂದಾಯ ಇಲಾಖೆಯ ಗ್ರಾಮ ಸಹಾಯಕರನ್ನು 'ಡಿ' ದರ್ಜೆಗೆ ಪರಿಗಣಿಸುವ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೪೩ (೭೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಮ್ಮ ರಾಜ್ಯದ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಗ್ರಾಮ ಸಹಾಯಕರನ್ನು 'ಡಿ' ದರ್ಜೆ ನೌಕರರನ್ನಾಗಿ ಪರಿಗಣಿಸಿ ಸೇವಾ ಭದ್ರತೆಯನ್ನು ಒದಗಿಸಲು ಸರ್ಕಾರವು ವಿಫಲವಾಗಿರುವುದರಿಂದ ನೌಕರರ ಬದುಕು ಅತಂತ್ರವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿ ಎಷ್ಟು ಜನ ಗ್ರಾಮ ಸಹಾಯಕರು ಸೇವೆ ಸಲ್ಲಿಸುತ್ತಿದ್ದಾರೆ ;

(ಇ) ಈ ಗ್ರಾಮ ಸಹಾಯಕರನ್ನು ಯಾವಾಗ ಖಾಯಂಗೊಳಿಸಲಾಗುವುದು ;

(ಈ) ಅಂದಿನಿಂದ ಸದರಿ ನೌಕರರಿಗೆ ಸಿಗಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ಬೆಳಗಾವಿ ನಗರದಲ್ಲಿ ಶ್ರೀ ದೇವರ ದಾಸಿಮಯ್ಯ ಜವಳಿ ಡಿಪ್ಲೋಮಾ ಕಾಲೇಜು ಸ್ಥಾಪನೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೬೪೪ (೬೯೭) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ನಗರದಲ್ಲಿ ಅತೀ ಹೆಚ್ಚು ನೇಕಾರರು ಕೂಲಿ ಕಾರ್ಮಿಕ ನೇಕಾರರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನೇಕಾರರ ಅಪೇಕ್ಷೆಯಂತೆ ಶ್ರೀ ದೇವರ ದಾಸಿಮಯ್ಯ ಜವಳಿ ಡಿಪ್ಲೋಮಾ ಕಾಲೇಜನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ ;

(ಇ) ಹಾಗಿದ್ದಲ್ಲಿ, ಈ ವರ್ಷ ಆಯವ್ಯಯದಲ್ಲಿ ನೀಡಿರುವ ಅನುದಾನವೆಷ್ಟು ;

(ಈ) ಇಲ್ಲದಿದ್ದಲ್ಲಿ, ಪ್ರಾರಂಭಮಾಡಲಾಗುವುದು ಯಾವಾಗ ?

## ರಾಜ್ಯದ ನೇಕಾರರಿಗೆ ಕೇಂದ್ರ ಸರ್ಕಾರದ ಯೋಜನೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೬೪೫ (೬೯೬) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ನೇಕಾರರು ಅಸಂಘಟಿತರು, ಕೂಲಿಕಾರ್ಮಿಕ ನೇಕಾರರಿಗೆ ಎಷ್ಟು ವರ್ಷಗಳಿಂದ ಕೇಂದ್ರ ಸರ್ಕಾರವು ಅನುದಾನ ನೀಡಿರುತ್ತದೆ ;

(ಆ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಿಗೆ ನೀಡಿರುವ ಸವಲತ್ತುಗಳ ಬಗ್ಗೆ ಕೇಂದ್ರ ಸರ್ಕಾರದ ಪಾಲೆಷ್ಟು ; ಯೋಜನೆಗಳು ಯಾವುವು, ಎಲ್ಲೆಲ್ಲಿ ನೀಡಲಾಗಿದೆ ;

(ಇ) ಕೇಂದ್ರ ಸರ್ಕಾರದ ಅನುದಾನದ ಜೊತೆ ರಾಜ್ಯ ಸರ್ಕಾರದ ಕೊಡುಗೆ ಏನು ;

(ಈ) ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರದ ಅನುದಾನ ಕಡಿಮೆಯಾಗಲು ಕಾರಣವೇನು ?

## ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೬೪೬ (೬೯೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಜವಳಿ ಪಾರ್ಕ್ ಸ್ಥಾಪನೆಗೊಂಡಿದ್ದು ಯಾವಾಗ, ಇದರ ವಿಸ್ತೀರ್ಣ ಎಷ್ಟು ;

(ಆ) ಈ ಜಾಗದಲ್ಲಿ ಎಷ್ಟು ವಿಂಗಡನೆ ಮಾಡಲಾಗಿದೆ ; ಯಾರ್ಯಾರಿಗೆ ಹಂಚಲಾಗಿದೆ ; (ಹೆಸರು ಸಮೇತ ವಿವರ ಕೊಡುವುದು)

(ಇ) ಈ ಜವಳಿ ಪಾರ್ಕ್‌ನಲ್ಲಿ ಎಷ್ಟು ಜವಳಿ ಉದ್ದಿಮೆದಾರರು ವಹಿವಾಟು ನಡೆಸುತ್ತಿದ್ದಾರೆ ; ಉಳಿದ ಉದ್ದಿಮೆದಾರರು ಯಾರು ;

(ಈ) ಖಾಲಿ ಉಳಿದಿರುವ ಜಾಗವೆಷ್ಟು ; ಪೂರ್ಣ ಮಟ್ಟದಲ್ಲಿ ನಡೆಸದಿರಲು ಕಾರಣವೇನು ;

(ಉ) ಈ ಜವಳಿ ಪಾರ್ಕ್‌ನಲ್ಲಿ ಸ್ಥಳೀಯ ನೇಕಾರರಿಗೆ ಆಗಿರುವ ಅನುಕೂಲಗಳೇನು ?

## ಪ್ರಗತಿ ಕಾಣದ ಕಲಬುರಗಿ ಜವಳಿ ಪಾರ್ಕ್ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೬೪೭ (೯೪) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇತ್ತೀಚಿನ ಕಲಬುರಗಿ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲಾಗಿದ್ದು ಯಾವಾಗ ; ಎಷ್ಟು ಎಕರೆ ಜಾಗದಲ್ಲಿ ನಿರ್ಮಾಣ ಮಾಡಲಾಗಿದೆ ;

(ಆ) ಈ ಜವಳಿ ಪಾರ್ಕ್‌ನಲ್ಲಿ ಯಾವ್ಯಾವ ಉದ್ದಿಮೆದಾರರಿಗೆ ಜಾಗ ನೀಡಲಾಗಿದೆ ; (ವಿಳಾಸ ಸಮೇತ ವಿವರ ನೀಡುವುದು)

(ಇ) ಸ್ಥಳೀಯ ಜಿಲ್ಲೆಯ ಎಷ್ಟು ಬಡ ನೇಕಾರರನ್ನು ಗುರುತಿಸಿ ಜಾಗ ನೀಡಲಾಗಿದೆ ;

(ಈ) ಈ ಜವಳಿ ಪಾರ್ಕ್‌ನಲ್ಲಿ ಬಡ ನೇಕಾರರ ಮಕ್ಕಳಿಗೆ ಎಷ್ಟು ಜನರಿಗೆ ಕೆಲಸ ನೀಡಲಾಗಿದೆ ?

## ನೇಕಾರ ಸಮುದಾಯಗಳು ಎದುರುಸುತ್ತಿರುವ ಸಮಸ್ಯೆ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು):–**

೬೪೮ (೯೫) ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ : ೨೧-೦೭-೨೦೧೫ ರಂದು ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಯು ಸರ್ಕಾರಕ್ಕೆ ನೇಕಾರ ಜನಾಂಗವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವರದಿ ಮಂಡಿಸಿರುವುದು ನಿಜವೇ ;

(ಆ) ಸರ್ಕಾರಕ್ಕೆ ವರದಿ ಮಂಡಿಸಿದ ಎಷ್ಟು ದಿನಗಳಲ್ಲಿ ಆ ಸಮಸ್ಯೆಗಳ ಬಗ್ಗೆ ಚರ್ಚೆ ಹಾಗೂ ಸಭೆ ನಡೆಸಲಾಗಿದೆ ; (ವಿವರ ನೀಡುವುದು)

(ಇ) ಸದರಿ ವರದಿಯ ಸಾರಾಂಶವೇನು ಹಾಗೂ ಸಲಹೆಗಳೇನು ;

(ಈ) ಈ ಸಲಹೆಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ತೀರ್ಮಾನಗಳೇನು ;

(ಉ) ಹಾಗಿದ್ದಲ್ಲಿ, ಇದುವರೆಗೂ ಸರ್ಕಾರಕ್ಕೆ ಸ್ಪಂದಿಸದಿರಲು ಕಾರಣವೇನು ?

## ಸಣ್ಣ ನೀರಾವರಿ ಕೆರೆಗಳ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೪೯ (೭೩೮) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಇರುವ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ಇಲಾಖೆಯು ಈ ಜಿಲ್ಲೆಗಳಲ್ಲಿ ಕೆರೆಗಳ ದುರಸ್ಥಿ ಮತ್ತಿತರ ಅಭಿವೃದ್ಧಿ ಕಾಮಗಾರಿಗೆ ಬಿಡುಗಡೆ ಮಾಡಿದ ಒಟ್ಟು ಅನುದಾನ ಎಷ್ಟು ; ಖರ್ಚು ಮಾಡಿದ ಅನುದಾನವೆಷ್ಟು ;

(ಇ) ಉಳಿದ ಅನುದಾನ ಎಷ್ಟು ; ಉಳಿಕೆಯಾಗಲು ಕಾರಣಗಳೇನು ? (ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)

## ಶಾಶ್ವತ ನೀರಾವರಿ ಯೋಜನೆಯ ಬಗ್ಗೆ

**ಶ್ರೀ ಸಿ.ಆರ್. ಮನೋಹರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೫೦ (೭೩೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿ ಶಾಶ್ವತ ನೀರಾವರಿ ಕಲ್ಪಿಸುವ ಯೋಜನೆಗಳು ಯಾವುವು ;

(ಆ) ಈ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು ; (ಯೋಜನವಾರು ಮಾಹಿತಿ ನೀಡುವುದು)

(ಇ) ಶಾಶ್ವತ ನೀರಾವರಿ ಯೋಜನೆ ಜಾರಿಯಲ್ಲಿದೆಯೇ ?

## ನಿರುದ್ಯೋಗಿ ಪದವೀಧರರಿಗೆ ಉದ್ಯೋಗಾವಕಾಶ ಸಿಗುವವರೆಗೆ ಸ್ಟೈಪೆಂಡರಿ ಅಥವಾ ಬೇರೆ ಇಲಾಖೆಯಲ್ಲಿ ತಾತ್ಕಾಲಿಕ ನೌಕರಿ ಕೊಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೬೫೧ (೬೮೮) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಎಷ್ಟು ಜನ ಪದವೀಧರ ನಿರುದ್ಯೋಗಿ ಯುವಕರು ಉದ್ಯೋಗ ಬೇಕೆಂದು ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಹೆಸರು ನೋಂದಾಯಿಸಿರುವರು ;

(ಆ) ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಹೆಸರು ನೋಂದಾಯಿಸದೇ ಇರುವ ಎಷ್ಟು ಜನ ನಿರುದ್ಯೋಗಿ ಪದವೀಧರರು ಇರುವರು ;

(ಇ) ಉದ್ಯೋಗ ದೊರಕುವವರೆಗೂ ಅವರಿಗೆ ಸ್ಟೈಪಂಡ್ ಕೊಡಲು ಕ್ರಮ ಕೈಗೊಳ್ಳಲಾಗುವುದೇ ;

(ಈ) ಈ ಹಿಂದೆ ಸರ್ಕಾರ ನಿರುದ್ಯೋಗಿ ಪದವೀಧರರಿಗೆ ಸ್ಟೈಪೆಂಡ್ ಕೊಟ್ಟು ವಿವಿಧ ಇಲಾಖೆಗಳಲ್ಲಿ ನೌಕರಿ ಕೊಟ್ಟಂತೆ ಹಾಲಿ ಸರ್ಕಾರ ಪುನಃ ಇದನ್ನು ಪ್ರಾರಂಭಿಸಲಾಗುವುದೇ ?

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ ರಚನೆ ಮಾಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೬೫೨ (೬೯೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನವನ್ನು ಮಾರ್ಪಡಿಸಿ "ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ" ವನ್ನು ರಚಿಸುತ್ತಿರುವುದು ಯಾವ ಹಂತದಲ್ಲಿರುತ್ತದೆ ;

(ಆ) ಈ ಪ್ರಾಧಿಕಾರದ ರಚನೆ ವಿಳಂಬವಾಗುತ್ತಿರಲು ಕಾರಣಗಳೇನು, ಯಾವ ಕಾಲಮಿತಿಯೊಳಗೆ ಪ್ರಾಧಿಕಾರವನ್ನು ರಚನೆ ಮಾಡಲು ಕ್ರಮ ಕೈಗೊಳ್ಳಲಾಗುವುದು ;

(ಇ) ಪ್ರಾಧಿಕಾರದ ಮುಖ್ಯ ಕಛೇರಿಯನ್ನು ಯಾವ ಸ್ಥಳದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ?

## ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಕಡಿಮೆ ಆಗುತ್ತಿರುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೬೫೩ (೬೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆ ಎಷ್ಟು ;

(ಆ) ಹುಲಿಗಳ ಸಂಖ್ಯೆ ಕಡಿಮೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಅವುಗಳ ಪಾಲನೆಗೆ ಅರಣ್ಯ ಇಲ್ಲದೆ ಇರುವುದರಿಂದ ಅವು ಅರಣ್ಯ ಬಿಟ್ಟು ನಗರ ಪ್ರದೇಶಕ್ಕೆ ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಹುಲಿಗಳನ್ನು ಸಂರಕ್ಷಿಸಲು ಹಾಗೂ ಅವುಗಳ ಸಂತತಿ ಹೆಚ್ಚಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು ?

## ಬಾಗಲಕೋಟೆ ಜಿಲ್ಲೆಯಲ್ಲಿ ಗೋಶಾಲೆಯನ್ನು ಪ್ರಾರಂಭಿಸುವ ಬಗ್ಗೆ ಹಾಗೂ ದನಗಳಿಗೆ ಕುಡಿಯುವ ನೀರು ಪೂರೈಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೬೫೪ (೬೯೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಯಾವ–ಯಾವ ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ ; ಅಲ್ಲಿ ಬರಗಾಲ ಇದ್ದುದ್ದರಿಂದ ಎಷ್ಟು ಗೋಶಾಲೆಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗಿದೆ ;

(ಆ) ಬಾದಾಮಿ ತಾಲ್ಲೂಕಿನಲ್ಲಿ ಸರ್ಕಾರದವರು ಗೋಶಾಲೆ ಪ್ರಾರಂಭಿಸದೇ ಇರುವುದರಿಂದ ರೈತರು ತಮ್ಮ ದನಗಳನ್ನು ಕಟುಕರಿಗೆ ಕೊಡಬಾರದು ಎಂಬ ಉದ್ದೇಶದಿಂದ ಶಿವಯೋಗಮಂದಿರದಲ್ಲಿ ಇರುವ ಗೋಶಾಲೆಯಲ್ಲಿ ತಮ್ಮ ದನಗಳನ್ನು ಬಿಟ್ಟು ಹೋಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಶಿವಯೋಗಮಂದಿರದಲ್ಲಿ ಗೋಶಾಲೆ ಪ್ರಾರಂಭಿಸಬೇಕು ಎಂದು ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ವಿನಂತಿಸಿಕೊಂಡ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಹಿಂದೆ ಬರಗಾಲ ಬಿದ್ದಾಗ ಶಿವಯೋಗಮಂದಿರದಲ್ಲಿ ಸರ್ಕಾರದವರು ಗೋಶಾಲೆ ಪ್ರಾರಂಭಿಸಿದ ಸಂಗತಿ ನಿಜವೇ ; ಈ ಹಿಂದೆ ಬರಗಾಲ ಬಿದ್ದಾಗ ಸರ್ಕಾರದವರು ಶಿವಯೋಗಮಂದಿರದಲ್ಲಿ ಪ್ರಾರಂಭಿಸಿದ ಗೋಶಾಲೆ ದನಗಳಿಗೆ ಮೇವು ಪೂರೈಸಿದ ಸಂಗತಿ ನಿಜವೇ ;

(ಉ) ಈ ವರ್ಷ ಸಹ, ಮೇವು ಹಾಗೂ ಕುಡಿಯುವ ನೀರಿಗಾಗಿ ಕೊಳವೆ ಬಾವಿ ತೋಡಿಸಲು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ವಿನಂತಿಸಿದರೂ ಇನ್ನುವರೆಗೂ ಕ್ರಮ ಕೈಗೊಳ್ಳದೇ ಇರುವ ಸಂಗತಿ ನಿಜವೇ ; ಬೆಳಗಾವಿ ಜಿಲ್ಲೆಯಲ್ಲಿ ಕಟ್ಟಿದಂತೆ ದನಗಳಿಗೆ ಕುಡಿಯುವ ನೀರಿನ ಸಲುವಾಗಿ ಗೋಕಟ್ಟೆ ಕಟ್ಟಲು ವಿನಂತಿಸಿದರೂ ಹಣಕಾಸಿನ ತೊಂದರೆ ಇರುವ ಸಂಗತಿ ನಿಜವೇ;

(ಊ) ಸರ್ಕಾರ ಈ ಕೆಲಸಕ್ಕೆ ಗೋಶಾಲೆ ಪ್ರಾರಂಭಿಸಲು ಹಣ ಬಿಡುಗಡೆ ಮಾಡದೇ ಇರುವುದರಿಂದ ಪ್ರಾರಂಭಿಸಲು ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಇರುವ ಸಂಗತಿ ನಿಜವೇ ;

(ಋ) ಬಾಗಲಕೋಟೆ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಸಲುವಾಗಿ ಯಾವ-ಯಾವ ಕೆಲಸಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಹಾಗೂ ಬಾದಾಮಿ ತಾಲ್ಲೂಕಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಅದರಲ್ಲಿ ಎಷ್ಟು ಹಣ ಯಾವ ಕೆಲಸಗಳಿಗೆ ಖರ್ಚು ಮಾಡಲಾಗಿದೆ ?

# ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿ ಶ್ರೀಕ್ಷೇತ್ರ ಸೊಗಲದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾದ ಕೆರೆ ಕೆಲಸ ಪ್ರಾರಂಭಿಸುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೬೫೫ (೬೯೦) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶ್ರೀ ಕ್ಷೇತ್ರ ಸೊಗಲದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೆರೆ ಕಟ್ಟುವ ಕೆಲಸ ಮಂಜೂರಾಗಿದೆಯೇ ; ಹಾಗಿದ್ದಲ್ಲಿ, ಪ್ರಸ್ತುತ ಕಾಮಗಾರಿಯು ಯಾವ ಹಂತದಲ್ಲಿದೆ ;

(ಆ) ಈ ಕೆಲಸದ ಅಂದಾಜು ವೆಚ್ಚ ಪತ್ರಿಕೆ ಸಿದ್ದಪಡಿಸಲಾಗಿದೆಯೇ ; ಅಂದಾಜು ಮೊತ್ತ ಎಷ್ಟು ಇದಕ್ಕೆ ಟೆಂಡರ್ ಕರೆಯಲಾಗಿದೆಯೇ;

(ಇ) ಕಂದಾಯ ಇಲಾಖೆಯ ಅಧಿಕಾರಿಗಳು ಕಂದಾಯ ಭೂಮಿಯನ್ನು ಅರಣ್ಯ ಇಲಾಖೆಯವರಿಗೆ ಕೊಡಲು ಸಿದ್ದರಿದ್ದರೂ ಅರಣ್ಯ ಇಲಾಖೆಯುವರು ಇನ್ನೂ ಕಬ್ಜಾ ಏಕೆ ತೆಗೆದುಕೊಳ್ಳಲು ಸಿದ್ದರಿರುವುದಿಲ್ಲ, ಈಗ ಆ ಪ್ರಸ್ತಾವನೆ ಯಾವ ಹಂತದಲ್ಲಿರುತ್ತದೆ;

(ಈ) ಅರಣ್ಯ ಇಲಾಖೆಯವರ ತಪ್ಪಿನಿಂದ ಈ ವರ್ಷ ಈ ಕೆಲಸಕ್ಕೆ ಒದಗಿಸಿದ ಹಣ ಲ್ಯಾಪ್ಸ್ ಆಗುವುದಿಲ್ಲವೆ ; ಹಾಗಿದ್ದಲ್ಲಿ ಕೂಡಲೇ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದೇ ;

(ಉ) ಜಮೀನು ಹಸ್ತಾಂತರವಾಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಇದಕ್ಕೆ ಯಾರು ಹೊಣೆಗಾರರು ;

(ಊ) ಈ ಕೆಲಸ ಈ ವರ್ಷ ಪ್ರಾರಂಭವಾಗದೇ ಇದ್ದಲ್ಲಿ ಮುಂದಿನ ವರ್ಷದ ಆಯವ್ಯಯದಲ್ಲಿ ಮುಂದುವರೆದ ಕೆಲಸವೆಂದು ತೋರಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಕಳಸ ಬಂಡೂರಿ ಕುಡಿಯುವ ನೀರಿನ ಯೋಜನೆ ಕುರಿತು

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೫೬ (೮೧೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಅನಗತ್ಯವಾಗಿ ಸಮುದ್ರ ಪಾಲಾಗುತ್ತಿರುವ ಸುಮಾರು ೧೯೦ ಟಿ.ಎಂ.ಸಿ. ಯಷ್ಟು ನೀರಿನಲ್ಲಿ ಕೇವಲ ೭ ಟಿ.ಎಂ.ಸಿ.ಯಷ್ಟು ನೀರನ್ನು ಕಳಸ ಬಂಡೂರಿ ಕುಡಿಯುವ ನೀರಿನ ಯೋಜನೆಗಾಗಿ ಒದಗಿಸಲು ರೈತರು ಕಳೆದ ೨೪೦ ದಿನಗಳಿಂದ ಹೋರಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರವು ಮಧ್ಯ ಪ್ರವೇಶಿಸಿ ಕಳಸ ಬಂಡೂರಿ ಮಹಾದಾಯಿ ಕುಡಿಯುವ ನೀರಿನ ಯೋಜನೆಗೆ ಪರಿಹಾರ ಕಂಡು ಹಿಡಿಯುವಲ್ಲಿ ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳೇನು;

(ಇ) ಈ ಬಗ್ಗೆ ಗೋವಾ ಮತ್ತು ಮಹಾರಾಷ್ಟ್ರ ಸರ್ಕಾರಗಳ ಸಹಕಾರ ಪಡೆಯಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ಕುಂದಾಪುರ ಅಕ್ರಮ–ಸಕ್ರಮ ಸಮಿತಿಯ ಕಾರ್ಯದರ್ಶಿಯಿಂದ ಮಂಜೂರಾತಿ ರದ್ದು ಕೋರಿ ಮೇಲ್ಮನವಿ ಹೋದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೫೭ (೭೧೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕುಂದಾಪುರ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿಯಿಂದ ಭೂ ಮಂಜೂರಾತಿಯಾಗಿ ಸಮಿತಿಯ ಕಾರ್ಯದರ್ಶಿಯು ಭೂ ಮಂಜೂರಾತಿ ರದ್ಧತಿಗಾಗಿ ಮೇಲ್ಮನವಿ ಸಲ್ಲಿಸಿದ ಪ್ರಕರಣಗಳು ಎಷ್ಟು ಅವು ಯಾವುವು ಮತ್ತು ಮೇಲ್ಮನವಿ ಸಲ್ಲಿಸಿರುವ ಉದ್ದೇಶವೇನು ;

(ಆ) ಸುಮಾರು ಒಂದು ಸಾವಿರಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭೂ ಮಂಜೂರಾತಿಯಾಗಿ ಹಣ ಪಾವತಿಸಿಯೂ ಹಕ್ಕುಪತ್ರ ನೀಡದೆ ಇರುವುದು ನಿಜವೇ ನಿಜವಾಗಿದ್ದಲ್ಲಿ, ಕಾರಣವೇನು ;

(ಇ) ಕುಂದಾಪುರ ತಾಲ್ಲೂಕು ಅಕ್ರಮ–ಸಕ್ರಮ ಸಮಿತಿ ಕಾರ್ಯದರ್ಶಿಯ ಸಮಿತಿಯಿಂದ ಸುಮಾರು ೩೦೦ ಕ್ಕೂ ಹೆಚ್ಚು ಭೂ ಮಂಜೂರಾತಿಯಾದುದನ್ನು ರದ್ದತಿ ಕೋರಿ ಮೇಲ್ಮನವಿ ಸಲ್ಲಿಸುವುದು, ಮತ್ತು ಹಕ್ಕುಪತ್ರ ನೀಡದೆ ಇರುವುದು ಮತ್ತು ಅಕ್ರಮ–ಸಕ್ರಮ ಸಮಿತಿಯ ಸಭೆಯನ್ನು ನಡೆಸುತ್ತಿರುವುದು ಒಂದಕ್ಕೊಂದು ದ್ವಂದ್ವವಾಗುವುದಿಲ್ಲವೇ ; ಈ ದ್ವಂದ್ವಕ್ಕೆಲ್ಲಾ ಪರಿಹಾರ ಕ್ರಮವನ್ನು ಕೈಗೊಳ್ಳಲಾಗುವುದೇ ?

## ವರಾಹಿ ನೀರಾವರಿ ಯೋಜನೆಯಲ್ಲಿ ಮೂರನೇ ಪಕ್ಷದವರಿಂದ ಕಳಪೆ ಕಾಮಗಾರಿ ತನಿಖೆ ನಡೆಸುವುದರ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೫೮ (೭೧೭) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಯಲ್ಲಿ ನಿರ್ವಹಿಸಲಾದ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಯಾಗಿರುವ ಬಗ್ಗೆ ದೂರುಗಳು ಬಂದಿರುವ ಪ್ರಕರಣಗಳು ಎಷ್ಟು ಅವು ಯಾವುವು ;

(ಆ) ಈ ರೀತಿ ದೂರು ಬಂದ ಪ್ರಕರಣಗಳಲ್ಲಿ ತನಿಖೆಯ ಜವಾಬ್ದಾರಿಯನ್ನು ಮೂರನೇ ಪಕ್ಷ (Third Party)ದವರಿಗೆ ವಹಿಸಿದ ಪ್ರಕರಣಗಳು ಎಷ್ಟು ಅವು ಯಾವುವು ; (ಪ್ರಕರಣವಾರು, ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು, ಕಾಮಗಾರಿ ಪರಿವೀಕ್ಷಿಸಿದ ಇಲಾಖಾ ಅಭಿಯಂತರರು ಹಾಗೂ ತನಿಖೆ ನಡೆಸುತ್ತಿರುವ ಮೂರನೇ ಪಕ್ಷದವರ ಹೆಸರು ವಿಳಾಸದೊಂದಿಗೆ ವಿವರ ನೀಡುವುದು)

(ಇ) ಸದರಿ ಯೋಜನೆಯಲ್ಲಿ ಕಾಮಗಾರಿಯಲ್ಲಿನ ಕಳಪೆ ಗುಣಮಟ್ಟದ ಕುರಿತು ಮೂರನೇ ಪಕ್ಷದವರಿಂದ ತನಿಖೆ ನಡೆಸಿ ಅವರಿಂದ ವರದಿ ಸಲ್ಲಿಸಲ್ಪಟ್ಟ ಪ್ರಕರಣಗಳು ಎಷ್ಟು ಅವು ಯಾವುವು ; ಆ ಪೈಕಿ ವರದಿ ಸಲ್ಲಿಸಲು ಬಾಕಿ ಇರುವ ಪ್ರಕರಣಗಳು ಎಷ್ಟು ಅವು ಯಾವುವು ;

(ಈ) ತನಿಖೆಯಿಂದ ಕಾಮಗಾರಿ ಕಳಪೆಯಾಗಿದೆ ಎನ್ನುವ ಕುರಿತು ಸಾಬೀತಾದ ಪ್ರಕರಣಗಳಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಪ್ರಕರಣವಾರು ವಿವರ ನೀಡುವುದು)

## ರಾಜ್ಯದಲ್ಲಿ ವಿವಿಧ ಇಲಾಖಾ ಅಭಿವೃದ್ಧಿ ಕೆಲಸಗಳಿಗೆ ಅರಣ್ಯ ಇಲಾಖೆಯ ಅನುಮತಿ ಕೋರಿದ ಪ್ರಕರಣಗಳ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೫೯ (೭೧೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಒಂದು ವರ್ಷಗಳಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕೆಲಸಗಳಿಗಾಗಿ ಅರಣ್ಯ ಇಲಾಖೆಯ ಅನುಮತಿ ಕೋರಲಾದ ಪ್ರಕರಣಗಳೆಷ್ಟು ಮತ್ತು ಅವು ಯಾವುವು ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಕಳೆದ ಒಂದು ವರ್ಷಗಳಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕೆಲಸಗಳಿಗಾಗಿ ಅರಣ್ಯ ಇಲಾಖೆಯ ಅನುಮತಿ ಕೋರಿದ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಲ್ಪಟ್ಟ ಪ್ರಕರಣಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರಸ್ತೆ ನಿರ್ಮಾಣಕ್ಕಾಗಿ ಅರಣ್ಯ ಇಲಾಖೆಯ ಅನುಮತಿ ಕೋರಿದ ಪ್ರಕರಣಗಳೆಷ್ಟು ; ಆ ಪೈಕಿ ಅನುಮತಿ ನೀಡಲಾದ ಪ್ರಕರಣಗಳೆಷ್ಟು ; ಅನುಮತಿ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು ; ಅವು ಯಾವುವು ?

## ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಪಹಣಿ ಪತ್ರ ವಿತರಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೬೦ (೭೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ವಿತರಣೆಯಾದ ಪಹಣಿ/ ಪತ್ರಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ತಿಂಗಳವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ರೈತರು ತಮ್ಮ ಬದುಕಿಗಾಗಿ ಪಹಣಿ ಪತ್ರಗಳನ್ನು ಪಡೆಯಲು ತಾಲ್ಲೂಕು ಕೇಂದ್ರಗಳಿಗೆ ಅಲೆಯುವುದನ್ನು ತಪ್ಪಿಸಲು ಗ್ರಾಮ ಪಂಚಾಯಿತಿಗಳಲ್ಲಿ ಪಹಣಿಪತ್ರಗಳನ್ನು ನೀಡುವ ಸರ್ಕಾರದ ಭರವಸೆಯನ್ನು ಈಡೇರಿಸಲಾಗುವುದೇ, ಇಲ್ಲವಾದಲ್ಲಿ ಕಾರಣವೇನು?

## ವರಾಹಿ ನೀರಾವರಿ ಇಲಾಖಾಧಿಕಾರಿಗಳು ಬಲದಂಡೆ ಯೋಜನೆ ಕಾಮಗಾರಿ ಹುನ್ನಾರ ನಡೆಸುತ್ತಿರುವ ಕುರಿತು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೬೧ (೭೧೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವರಾಹಿ ನೀರಾವರಿ ಯೋಜನೆಯ ಬಲದಂಡೆ ಕಾಲುವೆಯ ನಿರ್ಮಾಣಕ್ಕೆ ಶಂಕರನಾರಾಯಣ, ಅಂಪಾರು, ಕಾದಾಡಿ ಹಾಗೂ ಹಳ್ನಾಡು ಗ್ರಾಮಗಳಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆಯೇ ;

(ಆ) ಪ್ರಾರಂಭಿಸಲಾಗಿದ್ದಲ್ಲಿ, ೪(೧) ಹಾಗೂ ೬(೧) ಪ್ರಕ್ರಿಯೆಯು ಮುಕ್ತಾಯಗೊಂಡ ಪ್ರಕರಣಗಳು ಎಷ್ಟು ಅವು ಯಾವುವು ;

(ಇ) ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲಾಗಿದಿದ್ದಲ್ಲಿ ಪ್ರಕ್ರಿಯೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ; (ಗ್ರಾಮವಾರು, ಸರ್ವೆ ನಂಬರುವಾರು ವಿಸ್ತೀರ್ಣವಾರು ವಿವರ ನೀಡುವುದು)

(ಈ) ಸದರಿ ಯೋಜನೆಯ ಬಲದಂಡೆ ಕಾಲುವೆ ಕಾಮಗಾರಿಗೆ ಅಗತ್ಯ ಭೂ ಸ್ವಾಧೀನ ಪ್ರಕ್ರಿಯೆಯು ಮುಗಿದು ಪರಿಹಾರ ಧನ ನೀಡಿದ ಪ್ರಕರಣಗಳೆಷ್ಟು ; ಮತ್ತು ಪರಿಹಾರಧನ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು ? (ಪ್ರಕರಣವಾರು, ಪರಿಹಾರ ಪಡೆದವರ ಹೆಸರು, ವಿಳಾಸ, ಗ್ರಾಮ, ವಿಸ್ತೀರ್ಣ ಹಾಗೂ ಪರಿಹಾರದ ಮೊತ್ತದೊಂದಿಗೆ ವಿವರ ನೀಡುವುದು)

(ಉ) ಸದರಿ ಯೋಜನೆಯ ಬಲದಂಡೆ ಕಾಲುವೆ ನಿರ್ಮಾಣದಿಂದ ಯಾವ ಯಾವ ಗ್ರಾಮಗಳ ಎಷ್ಟು ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು; (ಗ್ರಾಮವಾರು ವಿವರ ನೀಡುವುದು)

(ಊ) ಸದರಿ ಯೋಜನೆಯ ಬಲದಂಡೆ ಕಾಲುವೆ ಕಾಮಗಾರಿಯನ್ನು ಖಾಸಗಿ ವಿದ್ಯುತ್ ಉತ್ಪಾದಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೈಬಿಡುವ ಹುನ್ನಾರ ಕೆಲವು ಅಧಿಕಾರಿಗಳಿಂದ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

## ಚಿಕ್ಕಮಗಳೂರು ಜಿಲ್ಲೆಯ ಬರಪೀಡಿತ ಪ್ರದೇಶಗಳ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೬೨ (೭೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಸಕ್ತ ಸಾಲಿಗೆ ಬರ ಪೀಡಿತ ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳು ಯಾವುವು ;

(ಆ) ಸದರಿ ಬರಪೀಡಿತ ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ ಬೆಳೆ ಪರಿಹಾರ ಧನವೆಷ್ಟು ; (ವಿವರ ನೀಡುವುದು)

(ಇ) ಕೇಂದ್ರದಿಂದ ರಾಜ್ಯಕ್ಕೆ ಬಂದಿರುವ ಬೆಳೆ ಪರಿಹಾರವೆಷ್ಟು ; ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ನೀಡಿರುವ ಪರಿಹಾರದಲ್ಲಿ ಕೇಂದ್ರದ ಮತ್ತು ರಾಜ್ಯದ ಪಾಲೆಷ್ಟು ; (ವಿವರ ನೀಡುವುದು)

(ಈ) ಚಿಕ್ಕಮಗಳೂರು ಜಿಲ್ಲಾದ್ಯಂತ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ; ಸದರಿ ರೈತರ ಕುಟುಂಬಕ್ಕೆ ಒದಗಿಸಿರುವ ಪರಿಹಾರ ಧನವೆಷ್ಟು ? (ರೈತರ ವಿಳಾಸದೊಂದಿಗೆ ಸಂಪೂರ್ಣ ವಿವರ ನೀಡುವುದು)

## ಬೆಂಗಳೂರು ಗ್ರಾಮಾಂತರ ಜಿಲ್ಲೆ ತ್ಯಾಮಗೊಂಡ್ಲು ಹೋಬಳಿ ಸ.ನಂ. ೧೩೬ನ್ನು ಪೋಡಿ ಮಾಡುವ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೬೩ (೮೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ತ್ಯಾಮಗೊಂಡು ಹೋಬಳಿಯನ್ನು ಕಂದಾಯ ಅದಾಲತ್ ಅಡಿ ಪೋಡಿ ಮುಕ್ತ ಎಂದು ಸರ್ಕಾರ ಘೋಷಣೆ ಮಾಡಿರುವುದು ನಿಜವೇ ;

(ಆ) ಹಾಗಿದ್ದರೆ, ಸುಮಾರು ೧೫–೨೦ ವರ್ಷಗಳ ಹಿಂದೆ ಮಂಜೂರಾಗಿರುವ ದರ್ಕಾಸ್ ಸರ್ಕಾರಿ ಜಮೀನುಗಳಿಗೆ ಹಲವು ಕಾರಣಗಳನ್ನು ಮುಂದಿಟ್ಟು ಪೋಡಿ ಮತ್ತು ಸರ್ವೆ ಮಾಡದಿರಲು ಕಾರಣವೇನು ;

(ಇ) ತ್ಯಾಮಗೊಂಡ್ಲು ಹೋಬಳಿ ಜಕ್ಕನಹಳ್ಳಿ ಗ್ರಾಮ ಸರ್ವೆ ನಂಬರ್ ೧೩೬ರಲ್ಲಿನ ಮಂಜೂರುದಾರರಿಗೆ ಎಷ್ಟು ದಿನಗಳಲ್ಲಿ ಸರ್ವೆ ಮತ್ತು ಪೋಡಿಯನ್ನು ಮಾಡಿಕೊಡಲಾಗುತ್ತದೆ ?

## ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೬೬೪ (೮೧೨) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಕಂಪನಿಯು ಅರಣ್ಯ ಇಲಾಖೆಯ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದು ನಿಜವೇ ;

(ಆ) ನಿಜವಾಗಿದ್ದಲ್ಲಿ ಉಲ್ಲಂಘಿಸಿರುವ ನಿಯಮಗಳ ಕುರಿತು ವಿವರ ನೀಡುವುದು ;

(ಇ) ಸದರಿ ಪ್ರದೇಶದ ಅಭಿವೃದ್ಧಿಗೆ ಇದೆ ಕಂಪನಿಯಿಂದ ಒಡಂಬಡಿಕೆಯಾಗಿರುವುದು ನಿಜವೇ ; (ವಿವರ ನೀಡುವುದು)

(ಈ) ಸದರಿ ಒಡಬಂಡಿಕೆ ಸರ್ಕಾರದ ಅನುಮತಿ ಪಡೆಯಲಾಗಿತ್ತೆ, ಇಲಾಖೆಯ ಉನ್ನತ ಅಧಿಕಾರಿಗಳು ಈ ಒಡಂಬಡಿಕೆಗೆ ಅಸಮಧಾನ ವ್ಯಕ್ತ ಪಡಿಸಿರುವುದು ನಿಜವೇ ;

(ಉ) ಈ ಕುರಿತು ಸರ್ಕಾರದ ಮುಂದಿನ ನಡೆಯೇನು ?

## ಅನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ, ಕಂದಾಯ ಇಲಾಖೆಯಿಂದ ಭೂಸುಧಾರಣೆ ಕಾಯ್ದೆ ಕಲಂ೭೯ಎ, ೭೯ಬಿ ಉಲ್ಲಂಘನೆಯಾಗಿರುವ ಕುರಿತು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೬೬೫ (೮೧೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಭೂಸುಧಾರಣಾ ಕಾಯಿದೆ ೧೯೬೧ರಡಿಯ ಕಲಂ ೭೯ಎ ಮತ್ತು ೭೯ಬಿ ಕುರಿತು ವಿವರ ನೀಡುವುದು ;

(ಆ) ೨೦೧೩–೧೪ರಿಂದ ಆನೇಕಲ್ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸದರಿ ಕಲಂನ ನಿಯಮ ಪಾಲಿಸದೆ ಉಲ್ಲಂಘನೆ ಆಗಿರುವುದು ನಿಜವೇ;

(ಇ) ಆನೇಕಲ್ ತಾಲ್ಲೂಕಿನ ವ್ಯಾಪ್ತಿಯಲ್ಲಿ, ಕಂದಾಯ ಇಲಾಖೆಯಿಂದ ಭೂಸುಧಾರಣೆ ಕಾಯ್ದೆ ಕಲಂ ೭೯ಎ ಮತ್ತು ೭೯ಬಿ ರಡಿಯಲ್ಲಿ ಪ್ರಕರಣ ದಾಖಲಿಸದೆ ಮುಟೇಷನ್ ದಾಖಲು ಮಾಡಿರುವ ಪ್ರಕರಣಗಳು ಇರುವುದು ನಿಜವೇ ;

(ಈ) ಈ ಸಂಬಂಧ ಯಾವುದಾದರೂ ದೂರುಗಳು ಬಂದಿವೆಯೇ ; ಬಂದಿದ್ದಲ್ಲಿ, ವಿವರ ನೀಡುವುದು ;

(ಉ) ಬಂದಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ?

## ಬೆಣ್ಣೆ ತೋರಾ ಯೋಜನೆ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೬೬೬ (೮೧೫) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯಲ್ಲಿರುವ ಬೆಣ್ಣೆ ತೋರಾ ಯೋಜನೆಯಲ್ಲಿ ಫಲಾನುಭವಿಗಳ ಜಮೀನುಗಳಿಗೆ ನೀರು ತಲುಪದೆ ಹಿಮ್ಮುಖವಾಗಿ ಹರಿಯುತ್ತಿರುವುದು ನಿಜವೇ ;

(ಆ) ನಿಜವಾಗಿದ್ದಲ್ಲಿ, ಟೇಲ್ ಎಂಡ್ ಲ್ಯಾಂಡ್‌ವರೆಗೆ ನೀರು ಹಾಯಿಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು; (ವಿವರ ನೀಡುವುದು)

(ಇ) ಇದನ್ನು ಸರಿಪಡಿಸಲು ಬೇಕಾಗುವ ಕಾಲಾವಧಿ ಎಷ್ಟು ? (ವಿವರ ನೀಡುವುದು)

## ಹುತಾತ್ಮರಾದ ರಾಜ್ಯದ ಸೈನಿಕರ ಕುಟುಂಬಕ್ಕೆ ಸೂಕ್ತ ಪರಿಹಾರ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೬೬೭ (೮೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಿಂದ ಹುತಾತ್ಮರಾದ ನಮ್ಮ ರಾಜ್ಯಕ್ಕೆ ಸೇರಿದ ಸೈನಿಕರುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹೆಸರು ಸಹಿತ ವಿವರ ನೀಡುವುದು)

(ಆ) ಇವರ ಕುಟುಂಬಕ್ಕೆ ಸರ್ಕಾರದಿಂದ ಯಾವ ರೀತಿಯ ಪರಿಹಾರ ಮತ್ತು ಅನುಕೂಲ ಕಲ್ಪಿಸಿಕೊಡಲಾಗಿದೆ ;

(ಇ) ಕುಂದಗೋಳ ಬೆಟದೂರಿನ ಸೈನಿಕ ಹನುಮಂತಪ್ಪ ಕೊಪ್ಪದರವರ ಪತ್ನಿ ಮಹಾದೇವಿಯವರು ಯಾವುದೇ ಸರ್ಕಾರಿ ಕೆಲಸವನ್ನು ನೀಡುವಂತೆ ಕೋರಿರುವುದು ನಿಜವೇ ;

(ಈ) ಈ ಸಂಬಂಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ?

## ಪೋಡಿ ಮುಕ್ತ ಗ್ರಾಮಗಳಾಗಿ ಮಾಡುವ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೬೮ (೭೦೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಯಾವ ಯಾವ ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮಗಳನ್ನಾಗಿ ಮಾಡಲು ಆಯ್ಕೆ ಮಾಡಲಾಗಿದೆ ; (ವಿವರ ನೀಡುವುದು)

(ಆ) ಬೀದರ್ ಜಿಲ್ಲೆಯಲ್ಲಿ ಮಂಜೂರಾಗಿರುವ ಸರ್ಕಾರಿ ಸರ್ವೇಯರ್‌ಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿಮಾಡಲಾಗುವುದು; (ವಿವರ ನೀಡುವುದು)

(ಇ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ತಹಶೀಲ್ದಾರ್/ನಾಡತಹಶೀಲ್ದಾರ್ ಹಾಗೆ ಸಿಬ್ಬಂದಿಗಳು ಎಷ್ಟು ; ಆಯಾ ಸಿಬ್ಬಂದಿಗಳ ಪದನಾಮದೊಂದಿಗೆ ಮತ್ತು ಸೇವೆ ಸಲ್ಲಿಸುತ್ತಿರುವ ಸ್ಥಳಗಳವಾರು ಮಾಹಿತಿ ನೀಡುವುದು)

(ಈ) ಔರಾದ್ ತಹಶೀಲ್ದಾರ್/ನಾಡತಹಶೀಲ್ದಾರರು ಹಾಗೂ ತಾಲ್ಲೂಕಿನಲ್ಲಿ ಸುಮಾರು ಸರ್ವೆಗಳು ಯಾರು ರೈತರಿಗೆ ಮತ್ತು ಭೂಮಿ ಪೋಡಿ ಮಾಡಿಸಿಕೊಳ್ಳುತ್ತಿರುವ ಜಮೀನುದಾರರಿಗೂ ಅನಾವಶ್ಯಕವಾಗಿ ತೊಂದರೆ ನೀಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದೆಯೇ, ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು;

(ಉ) ಇಂತಹ ಅಧಿಕಾರಿ/ಸರ್ವೇಯರ್‌ಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಬೀದರ್ ಜಿಲ್ಲೆಗೆ ಸರ್ಕಾರದಿಂದ ಎಸ್.ಸಿ./ಎಸ್.ಟಿ ಯವರಿಗೆ ನೀಡುವ ಸೌಲಭ್ಯಗಳ ಬಗ್ಗೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೬೯ (೭೨೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ೨೦೧೪ ರಿಂದ ಮಾರ್ಚ್ ಈ ಸಾಲಿನವರೆಗೆ ಬೀದರ್ ಜಿಲ್ಲೆಗೆ ಸಣ್ಣ ನೀರಾವರಿ ಯೋಜನೆಯಲ್ಲಿ ಸರ್ಕಾರದಿಂದ ಎಸ್.ಸಿ./ಎಸ್.ಟಿ ಮತ್ತು ಸಣ್ಣ ಹಿಡುವಳಿದಾರರ ರೈತ ಕುಟುಂಬಗಳಿಗೆ ಕೊಳವೆಬಾವಿ ಕೊರೆಸುವ ಯೋಜನೆ ಇದೆಯೇ ; ಇದ್ದರೆ ಜಿಲ್ಲೆಯಲ್ಲಿ ಕೊರೆದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಯೋಜನೆಯಡಿಯಲ್ಲಿ ಕೊಳವೆ ಬಾವಿ ಕೊರೆಸಲು ಬಂದ ಅರ್ಜಿಗಳೆಷ್ಟು ; ಅವುಗಳಲ್ಲಿ ಆಯ್ಕೆಯಾದ ಫಲಾನುಭವಿಗಳೆಷ್ಟು; ಮತ್ತು ತಿರಸ್ಕರಿಸಿದ ಅರ್ಜಿಗಳೆಷ್ಟು ; (೨೦೧೪ ರಿಂದ ೨೦೧೬ನೇ ಮಾರ್ಚ್ ೧೫ರವರೆಗೆ ತಾಲ್ಲೂಕುವಾರು ರೈತರ ಸಂಪೂರ್ಣ ಮಾಹಿತಿ ನೀಡುವುದು)

(ಇ) ೨೦೧೪ ರಿಂದ ೨೦೧೬ನೇ ಸಾಲಿನವರೆಗೆ ಬೀದರ್ ಜಿಲ್ಲೆಯಲ್ಲಿ ಕೊಳವೆ ಬಾವಿಯನ್ನು ಕೊರೆಸಲು ಬಂದ ಅನುದಾನ ಎಷ್ಟು ; ಆ ಪೈಕಿ ವಿನಿಯೋಗಿಸಲಾದ ಅನುದಾನ ಎಷ್ಟು ; ಬಾಕಿ ಉಳಿದ ಅನುದಾನ ಎಷ್ಟು ; ಅನುದಾನ ಉಳಿಯಲು ಕಾರಣವೇನು ; (ಸಂಪೂರ್ಣ ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಈ) ಜಿಲ್ಲೆಯಲ್ಲಿ ಕೊಳವೆ ಬಾವಿಯನ್ನು ಕೊರೆಯಿಸದೇ ಲಕ್ಷ ಗಟ್ಟಲೇ ಬಿಲ್ಲನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಉ) ಒಂದು ಕೊಳವೆ ಬಾವಿಯನ್ನು ಕೊರೆಸಲು ತಗಲುವ ವೆಚ್ಚ ಎಷ್ಟು ; (ಕೊಳವೆ ಬಾವಿ ಪಂಪ್‌ಸೆಟ್ ವಿದ್ಯುತ್ ಇತರ ಸಂಪರ್ಕ ಒಳಗೊಂಡಂತೆ ಅದರ ವಿವರ ನೀಡುವುದು)

## ವಿವಿಧ ಯೋಜನೆಗಳ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೭೦ (೭೦೫) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ ಔರಾದ ವಲಯದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಕೈಗೊಂಡಿರುವ ಒಟ್ಟು ಕಾಮಗಾರಿಗಳೆಷ್ಟು ; (ಮಾಹಿತಿ ನೀಡುವುದು)

(ಆ) ಹಾಗೇ ಈ ವಲಯದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ ; ಅವುಗಳು ಎಲ್ಲೆಲ್ಲಿವೆ ; (ಅವುಗಳ ಸ್ಥಳದ ಮಾಹಿತಿ ನೀಡುವುದು ಹಾಗೆ ಯಾವ ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಹಣ ಬಿಡುಗಡೆ ಮಾಡಲಾಗಿದೆ ; ಆ ಕಾಮಗಾರಿಗಳಿಗೆ ತಗಲಿದ ವೆಚ್ಚವೆಷ್ಟು ; (ಮಾಹಿತಿ ನೀಡುವುದು)

(ಇ) ೨೦೧೪–೧೫ ಮತ್ತು ೨೦೧೫–೧೬ನೇ ಸಾಲಿನಲ್ಲಿ 'CPT'ಯ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ಮಾಹಿತಿ ಒದಗಿಸುವುದು)

(ಈ) 'CPT' ಕಾಮಗಾರಿಗಳು ಕೈಗೊಂಡಿದ್ದಲ್ಲಿ ಆಯಾ ಕಾಮಗಾರಿಯ ಉದ್ದ/ಅಳತೆ ಎಷ್ಟು ? (ವಿವರವಾದ ಮಾಹಿತಿ ನೀಡುವುದು) ಕಾಮಗಾರಿಗೆ ತಗುಲಿದ ವೆಚ್ಚ ಎಷ್ಟು, ಈ ಕಾಮಗಾರಿ ಕೈಗೊಂಡ ಗುತ್ತಿಗೆದಾರರ ಮಾಹಿತಿಯೊಂದಿಗೆ, ವರ್ಷವಾರು, ವೆಚ್ಚವಾರು (ಮಾಹಿತಿಯ ವಿವರ ನೀಡುವುದು)

## ಬರಪರಿಹಾರಕ್ಕಾಗಿ ರಾಜ್ಯಕ್ಕೆ ಬಿಡುಗಡೆಯಾದ ಮೊತ್ತ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೭೧ (೭೦೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರದಿಂದ ೨೦೧೪–೧೫ನೇ ಸಾಲಿನಲ್ಲಿ ಬರ ಪರಿಹಾರಕ್ಕಾಗಿ ರಾಜ್ಯಕ್ಕೆ ಬಿಡುಗಡೆಯಾದ ಅನುದಾನದ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಅನುದಾನದಲ್ಲಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ; (ಮಾಹಿತಿ ಒದಗಿಸುವುದು)

(ಇ) ಬೀದರ್ ಜಿಲ್ಲೆಯಲ್ಲಿ ತೀವ್ರವಾದ ಬರಗಾಲದಿಂದ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಬೀದರ್ ಜಿಲ್ಲೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಅರಣ್ಯೀಕರಣ, ನೇಡುತೋಪಿನ ರಕ್ಷಣೆಗಾಗಿ ನರ್ಸರಿಗಳಿಗಾಗಿ ಮಾಡಲಾದ ವೆಚ್ಚ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೬೭೨ (೭೦೬) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೪–೧೫ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನ ವಲಯದಲ್ಲಿ ಕೈಗೊಂಡ ಅರಣ್ಯೀಕರಣ ಕಾಮಗಾರಿಗಳೆಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಆ) ೨೦೧೪–೧೫ನೇ ಸಾಲಿನಲ್ಲಿ ನೇಡುತೋಪಿನ ರಕ್ಷಣೆಗಾಗಿ ಕೈಗೊಂಡಿರುವ ಕ್ರಮವೇನು ; (ವರ್ಷವಾರು ಮತ್ತು ರಕ್ಷಣೆಗಾಗಿ ತಗಲಿದ ವೆಚ್ಚವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಔರಾದ ವಲಯ ವ್ಯಾಪ್ತಿಯಲ್ಲಿ ಎಷ್ಟು ನರ್ಸರಿಗಳಿವೆ ; ಹಾಗೆ ಈ ನರ್ಸರಿಗಳಲ್ಲಿ ಯಾವ ಯಾವ ಜಾತಿಯ ಸಸಿಗಳನ್ನು ಬೆಳೆಸಲಾಗುತ್ತಿದೆ ; (ವಿವರ ನೀಡುವುದು)

(ಈ) ಹಾಗಿದ್ದಲ್ಲಿ, ಈ ನರ್ಸರಿಗಳಲ್ಲಿ ಸಸಿಗಳನ್ನು ಬೆಳೆಸಲು ಮಾಡಲಾದ ವೆಚ್ಚವೆಷ್ಟು ; (ನರ್ಸರಿವಾರು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

## ಗಣಕ ಯಂತ್ರಗಳ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೭೩ (೭೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೂಮಿ ಕೇಂದ್ರದಲ್ಲಿ ಹಳೆಯ ಕಾಲದ ಕಂಪ್ಯೂಟರ್‌ಗಳಿದ್ದು ತ್ವರಿತವಾಗಿ ಕರ್ತವ್ಯ ನಿರ್ವಹಿಸಲು ಅನಾನುಕೂಲವಾಗುತ್ತಿರುವುದರಿಂದ ಹೊಸ ಮಾದರಿಯ ಕಂಪ್ಯೂಟರ್‌ಗಳನ್ನು ಅಳವಡಿಸಿ ವ್ಯವಸ್ಥೆಯನ್ನು ಆಧುನೀಕರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ದರಕಾಸ್ತು ಅಡಿಯಲ್ಲಿ ಮಂಜೂರಾಗಿರುವ ನಂಬರ್‌ಗಳು ಪೋಡಿಯಾಗದೇ ಉಳಿದಿರುವುದರಿಂದ ಸರ್ಕಾರ ಸರ್ವೆಯರ್‌ಗಳ ಕೊರತೆಯನ್ನು ನೀಗಿಸುವುದೆ ?

## ವೃಷಭಾವತಿ ನದಿಯ ಕಲುಷಿತಗೊಂಡಿರುವ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೭೪ (೭೭೩) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವೃಷಭಾವತಿ ನದಿಯ ಮೂಲ ಯಾವುದು ; (ಉದ್ದ, ಹಾಗೂ ಒಳಹರಿವಿನ ವಿವರ ನೀಡುವುದು) ವೃಷಭಾವತಿ ನದಿಯು ಸಂಪೂರ್ಣ ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಅದಕ್ಕೆ ಕಾರಣ ಹಾಗೂ ಅದರಿಂದ ಉಂಟಾಗುವ ದುಷ್ಪರಿಣಾಮಗಳೇನು ;

(ಆ) ನದಿಯ ನೀರನ್ನು ಶುದ್ಧೀಕರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಆಕಸ್ಮಿಕ ಬೆಂಕಿ ಅನಾಹುತದಿಂದ ಕಾಡು ಭಸ್ಮವಾಗಿರುವ ಕುರಿತು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೬೭೫ (೭೮೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ತಿಂಗಳಲ್ಲಿ ಆಕಸ್ಮಿಕ ಬೆಂಕಿ ಅನಾಹುತದಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಯಾವ ಯಾವ ವಲಯದಲ್ಲಿ ಎಷ್ಟೆಷ್ಟು ಎಕರೆ ಕಾಡು ಭಸ್ಮವಾಗಿದೆ ; ಅಂದಾಜು ನಷ್ಟ ಎಷ್ಟು ವನ್ಯ ಮೃಗಗಳು, ಪ್ರಾಣಿ ಪಕ್ಷಿಗಳಿಗೆ ಹಾನಿ ಆಗಿದೆಯೇ ; (ವಿವರ ಒದಗಿಸುವುದು)

(ಆ) ಬೇಸಿಗೆ ಸಮಯದಲ್ಲಿ ಕಾಡಿಗೆ ಬೆಂಕಿ ಬೀಳದಂತೆ ಮೈಸೂರು ಚಾಮರಾಜನಗರ ಅರಣ್ಯ ವಲಯಗಳಲ್ಲಿ ಫೈರ್‌ಲೈನ್ ನಿರ್ಮಾಣ, ದಿನಗೂಲಿ ವಾಚರ್ಸ್ ನೇಮಕ, ಸ್ವಯಂ ಸೇವಕರ ನೇಮಕ, ನೀರು ಸರಬರಾಜು ಕೈಗೊಂಡಿರುವ ಕ್ರಮಗಳ ವಿವರವನ್ನು ಒದಗಿಸುವುದು ; ಈ ಎಲ್ಲ ಮುನ್ನೆಚ್ಚರಿಕೆ ಕ್ರಮಗಳಿಗಾಗಿ ಕಳೆದ ವರ್ಷ ಮಾಡಿದ್ದ ವೆಚ್ಚ ಎಷ್ಟು ; ಈ ವರ್ಷ ಮಾಡಿರುವ ವೆಚ್ಚ ಎಷ್ಟು ? (ವಿವರ ನೀಡುವುದು)

## ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ವಾಹನ ಸೌಲಭ್ಯ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೬೭೬ (೭೮೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಎಲ್ಲ ಬಗೆಯ ಖಾಸಗಿ ವಾಹನಗಳ ಪ್ರವೇಶವನ್ನು ನಿಷೇಧಿಸಲಾಗಿದೆಯೇ ;

(ಆ) ಇದರಿಂದಾಗಿ ಈ ಬೆಟ್ಟಕ್ಕೆ ಹಾಗೂ ಬೆಟ್ಟದ ಮೇಲಿನ ಗೋಪಾಲಸ್ವಾಮಿ ದೇವಾಲಯಕ್ಕೆ ಹೋಗುವ ಪ್ರವಾಸಿಗರು, ಭಕ್ತರಿಗೆ ಬಹಳ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಜೊತೆಗೆ, ಅರಣ್ಯ ಇಲಾಖೆಯ ವಾಹನಗಳನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಬೆಟ್ಟದ ಕೆಳಗಿರುವ ಟೋಲ್‌ಗೇಟ್‌ನಿಂದ ಓಡಿಸುವ ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಂಡಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಈ) ಟೋಲ್‌ಗೇಟ್ ಬಳಿ ನಿಲ್ಲಿಸುವ ಖಾಸಗಿ ವಾಹನಗಳಿಗೆ ಸೂಕ್ತ ವಾಹನ ನಿಲ್ದಾಣವನ್ನು ನಿರ್ಮಿಸಿ ಪ್ರವಾಸಿಗರಿಗೆ ಕುಡಿಯುವ ನೀರು ಶೌಚಾಲಯು ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಜರುಗಿಸಲಾಗುವುದೇ ?

## ಗುಂಡ್ಲುಪೇಟೆ ತಾಲ್ಲೂಕು ಹೈರಿಗೆ ಗ್ರಾಮದಲ್ಲಿ ರೈವಿನ್ಯೂ ಇಲಾಖೆಯ ಕಟ್ಟಡ ಪಾಳು ಬಿದ್ದಿರುವ ಬಗ್ಗೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೬೭೭ (೭೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಂಡ್ಲುಪೇಟೆ ತಾಲ್ಲೂಕು ಹೈರಿಗೆ ಗ್ರಾಮದಲ್ಲಿ ರೆವಿನ್ಯೂ ಇಲಾಖೆಗೆ ಸೇರಿದ ಕಟ್ಟಡವನ್ನು ಯಾವಾಗ ನಿರ್ಮಿಸಲಾಯಿತು ; ಇದಕ್ಕೆ ತಗುಲಿರುವ ವೆಚ್ಚ ಎಷ್ಟು ; ಯಾವ ಉದ್ದೇಶಕ್ಕಾಗಿ ಈ ಕಟ್ಟಡ ನಿರ್ಮಿಸಲಾಗಿದೆ ;

(ಆ) ನಿರ್ಮಾಣವಾದಾಗಿನಿಂದಲೂ ಇದನ್ನು ಉಪಯೋಗಿಸದೆ, ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಮತ್ಸಾಶ್ರಯ ಯೋಜನೆಯಡಿಯಲ್ಲಿ ಮನೆಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೬೭೮ (೭೦೩) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷದಲ್ಲಿ ಹಾವೇರಿಯಲ್ಲಿ ಮತ್ಸಾಶ್ರಯ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು ಫಲಾನುಭವಿಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಆ) ಮತ್ಸಾಶ್ರಯ ಯೋಜನೆಯಡಿಯಲ್ಲಿ ಈಗಾಗಲೇ ಮಂಜೂರು ಮಾಡಿರುವ ಮನೆಗಳನ್ನು ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲಾಗಿದೆಯೇ ; ಒಟ್ಟು ಫಲಾನುಭವಿಗಳಿಗೆ ಎಷ್ಟು ಅನುದಾನ ನೀಡಲಾಗಿದೆ ; ಒಟ್ಟು ಅನುದಾನ ಎಷ್ಟು ಬಿಡುಗಡೆ ಮಾಡದಿದ್ದಲ್ಲಿ ಕಾರಣಗಳೇನು ; (ಗ್ರಾಮವಾರು ಫಲಾನುಭವಿವಾರು ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಇ) ಈಗಾಗಲೇ ಹಂಚಿಕೆ ಮಾಡಿರುವ ಮನೆಗಳನ್ನು ನಿರ್ಮಾಣ ಮಾಡಲಾಗಿದೆಯೇ ; ಹೆಚ್ಚುವರಿ ಮನೆಗಳನ್ನು ಪುನ: ಹಂಚಿಕೆ ಮಾಡಲಾಗುವುದೇ ;

(ಈ) ಹೆಚ್ಚುವರಿ ಮನೆಗಳನ್ನು ಹಂಚಿಕೆ ಮಾಡವ ಪ್ರಸ್ತಾವನೆಯು ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯಲ್ಲಿ ಹಂಚಿಕೆ ಮಾಡಲಾಗುವುದು ? (ವಿವರ ನೀಡುವುದು)

## ರಾಜ್ಯದಲ್ಲಿ ತಾಲ್ಲೂಕು ಮತ್ತು ಜಿಲ್ಲೆಗಳು ಹಾಗೂ *D.D.L.R.* ಹಾಗೂ *A.D.L.R.* ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೬೭೯ (೭೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ತಾಲ್ಲೂಕುಗಳು ಮತ್ತು ಜಿಲ್ಲೆಗಳು ಎಷ್ಟು ;

(ಆ) ರಾಜ್ಯದಲ್ಲಿರತಕ್ಕ ಡಿ.ಡಿ.ಎಲ್.ಆರ್. ಮತ್ತು ಎ.ಡಿ.ಎಲ್.ಆರ್.ಗಳು ಎಷ್ಟು ;

(ಇ) ಮಂಜೂರಾದ ಹುದ್ದೆಗಳು ಎಷ್ಟು ; ಕಾರ್ಯ ನಿರ್ವಹಿಸುತ್ತಿರುವ ಡಿ.ಡಿ.ಎಲ್.ಆರ್. ಮತ್ತು ಎ.ಡಿ.ಎಲ್.ಆರ್.ಗಳು ಎಷ್ಟು ;

(ಈ) ರಾಜ್ಯದಲ್ಲಿ ಸರ್ವೆ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತುರ್ತಾಗಿ ಕೈಗೊಂಡಿರುವ ಕ್ರಮಗಳಾವುವು ?

## ಹಾವೇರಿ ಜಿಲ್ಲೆಯ ಒಟ್ಟು ಕೆರೆಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೬೮೦ (೭೪೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿರುವ ಒಟ್ಟು ಕೆರೆಗಳು ಎಷ್ಟು ; ಮತ್ತು ಅವುಗಳ ವಿಸ್ತೀರ್ಣ ಎಷ್ಟು ; ಅವುಗಳ ಅಭಿವೃದ್ಧಿಗೆ ೨೦೧೩ರಿಂದ ಇಲ್ಲಿಯವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು, ಕೆರೆವಾರು ವಿವರ ಒದಗಿಸುವುದು)

(ಆ) ಜಿಲ್ಲೆಯ ಬಂಕಾಪೂರ ಕೆರೆ ಕಲುಷಿತಗೊಂಡಿರುವುದು ಮತ್ತು ಈ ಕೆರೆಗೆ ತಡೆಗೋಡೆ ಇಲ್ಲದಿರುವುದರಿಂದ ಜನರು ಪ್ರಾಣಾಪಾಯದಿಂದ ಓಡಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ :

(ಇ) ಬಂದಿದ್ದರೆ, ಕೈಗೊಂಡಿರುವ ಕ್ರಮಗಳಾವುವು ; ಕೈಗೊಳ್ಳಬೇಕಾಗಿರುವ ಕ್ರಮಗಳು ಯಾವುವು ; ಮಲ್ಲಪ್ಪನ ಕೆರೆ ಸೇರಿದಂತೆ ಸಮಗ್ರ ಅಭಿವೃದ್ಧಿ ಜೊತೆಗೆ ಪಟ್ಟಣದಲ್ಲಿ ಇನ್ನುಳಿದ ಕೆರೆ, ಹೊಂಡಗಳ ಅಭಿವೃದ್ಧಿಗೆ ಯಾವ ಕ್ರಮ ಕೈಗೊಳ್ಳಲಾಗುವುದು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಹಾವೇರಿ ಜಿಲ್ಲೆಯ ಶಿಗ್ಗಾವಿ ಪಟ್ಟಣದಲ್ಲಿರುವ ಹಿರೆ ಕೆರೆ ಅಕ್ರಮ ಒತ್ತುವರಿ ಹಾಗೂ ಜಾಲಿ ಮುಳ್ಳಿನ ಕಂಟಿನಿಂದ ಕೂಡಿ ಮೂಲಭೂತ ಸೌಕರ್ಯಗಳಿಲ್ಲದೇ ಹಿರೆ ಕೆರೆ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಕೆರೆಯ ಸಮಗ್ರ ಅಭಿವೃದ್ಧಿಗೆ ಯಾವ ಕ್ರಮ ಕೈಗೊಂಡಿದೆ ; ಇದಕ್ಕಾಗಿ ೨೦೧೩ರಿಂದ ಇಲ್ಲಿಯವರೆಗೂ ಬಿಡುಗಡೆಯಾದ ಹಣವೆಷ್ಟು ?

## ಹಾವೇರಿ ಜಿಲ್ಲೆಯಲ್ಲಿ ಇಲಾಖೆಯಿಂದ ೨೦೧೩–೧೪ ರಿಂದ ೨೦೧೫–೧೬ ರಲ್ಲಿ ಕೊರೆದ ಕೊಳವೆ ಬಾವಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು):–**

೬೮೧ (೭೧೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ೨೦೧೩–೧೪ ರಿಂದ ೨೦೧೫–೧೬ರವರೆಗೆ ಕೊರೆಯಿಸಿದ ಕೊಳವೆ ಬಾವಿಗಳು ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ಯೋಜನೆಯಲ್ಲಿ ಕೊರೆಯಿಸಿದ ಕೊಳವೆ ಬಾವಿಗಳ ಫಲಾನುಭವಿಗಳು ಯಾರು ; (ಫಲಾನುಭವಿಗಳು ಗ್ರಾಮವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಈ ಎಲ್ಲಾ ಫಲಾನುಭವಿಗಳಿಗೆ ಕೊರೆದ ಕೊಳವೆ ಬಾವಿಗಳಿಗೆ ಪಂಪು, ಪೈಪು, ವಿದ್ಯುತ್ ಸಲಕರಣೆಗಳು ಪೂರೈಕೆಯಾಗಿವೆಯೇ ; ಇನ್ನುಳಿದ ಫಲಾನುಭವಿಗಳು ಎಷ್ಟು ; ಉಳಿದ ಫಲಾನುಭವಿಗಳಿಗೆ ಯಾವಾಗ ಪೂರೈಕೆ ಮಾಡಲಾಗುವುದು ? (ವಿವರ ನೀಡುವುದು)

## ಚಿಣ್ಣರ ವನ ದರ್ಶನ, ಹಸಿರು ಶಾಲಾ ವನ ಹಾಗೂ ಹಸಿರು ಗ್ರಾಮ ಯೋಜನೆಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೬೮೨ (೭೭೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿದ್ಯಾರ್ಥಿಗಳಿಗಾಗಿ ರೂಪಿಸಿದ "ಚಿಣ್ಣರ ವನ ದರ್ಶನ" ಯೋಜನೆ ಅಡಿ ರಾಜ್ಯದಲ್ಲಿ ಎಷ್ಟು ಪ್ರೌಢ ಶಾಲೆಗಳ ವಿದ್ಯಾರ್ಥಿಗಳನ್ನು ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ ; ಇದಕ್ಕಾಗಿ ಈವರೆವಿಗೂ ಖರ್ಚಾಗಿರುವ ಹಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ತಾಲ್ಲೂಕಿಗೆ ಒಂದು "ಹಸಿರು ಶಾಲಾ ವನ" ಯೋಜನೆ ಅಡಿ ರಾಜ್ಯದಲ್ಲಿ ಎಷ್ಟು ಸರ್ಕಾರಿ ಶಾಲಾ/ಕಾಲೇಜುಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ ; ಇದಕ್ಕಾಗಿ ಈವರೆಗೆ ಖರ್ಚು ಮಾಡಿದ ಹಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ತಾಲ್ಲೂಕಿಗೊಂದು "ಹಸಿರು ಗ್ರಾಮ" ಯೋಜನೆಯಡಿ ರಾಜ್ಯದಲ್ಲಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಿ ಯೋಜನೆಯನ್ನು ಪ್ರಾರಂಭಿಸಲಾಗಿದೆ ; ಇದಕ್ಕಾಗಿ ಈವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ೨೦೧೪–೧೫ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ನೀಡಿರುವ ಅನುದಾನದ ವಿವರಗಳ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೮೫ (೭೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨೦೧೪-೧೫ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಕೊಡಗು ಜಿಲ್ಲೆಗೆ ನೀಡಿದ ಅನುದಾನದಲ್ಲಿ ಬಿಡುಗಡೆಯಾದ ಹಣ ಎಷ್ಟು ; ಖರ್ಚು ಮಾಡಲಾಗಿರುವ ಹಣ ಎಷ್ಟು ; (ವಿವರ ನೀಡುವುದು)

(ಆ) ೨೦೧೪-೧೫ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ನಡೆಸಲಾದ ಕಾಮಗಾರಿಗಳು ಯಾವುವು ? (ವಿವರ ನೀಡುವುದು)

## ಸರ್ಕಾರಿ ಜಮೀನು ಒತ್ತುವರಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-**

೬೮೪ (೭೮೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನುಗಳು ಅಧಿಕ ಪ್ರಮಾಣದಲ್ಲಿ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಒತ್ತುವರಿಯಾಗಿರುವ ಪ್ರದೇಶಗಳಾವುವು ; ಅವುಗಳ ವಿಸ್ತೀರ್ಣವೆಷ್ಟು ;

(ಇ) ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಸರ್ಕಾರ ಕೈಗೊಂಡ ಶಿಸ್ತಿನ ಕ್ರಮವೇನು ; ಒತ್ತುವರಿದಾರರು ಯಾರು ;

(ಈ) ಒತ್ತುವರಿದಾರರಿಂದ ಪಡೆಯಲಾದ/ವಶಪಡಿಸಿಕೊಂಡ ಜಮೀನನ್ನು ಯಾವ ಯಾವ ಉದ್ದೇಶಗಳಿಗೆ ಬಳಸಲಾಗಿದೆ ? (ವಿವರ ನೀಡುವುದು)

## ಪ್ರಕೃತಿ, ಬೆಂಕಿ ಅನಾಹುತಗಳಿಗೆ ವಿತರಿಸಿರುವ ಪರಿಹಾರದ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೬೮೫ (೭೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಕೃತಿ ವಿಕೋಪ, ಬೆಂಕಿ ಅನಾಹುತಕ್ಕೊಳಗಾದ ಮನೆ, ಗುಡಿಸಲುಗಳ ಸಂಖ್ಯೆ ಎಷ್ಟು ; ಇದರಿಂದಾದ ಆಸ್ತಿ ಮತ್ತು ಪ್ರಾಣ ಹಾನಿಗಳ ಮಾಹಿತಿ ನೀಡುವುದು ;

(ಆ) ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಸ್ಮಶಾನ ಮಂಜೂರಾತಿಗಾಗಿ ಬಿಡುಗಡೆಯಾದ ಹಣವೆಷ್ಟು ; ಖರೀದಿಸಿರುವ ಭೂಮಿಯ ವಿಸ್ತೀರ್ಣವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ ಚಾಲ್ತಿಯಲ್ಲಿದೆಯೇ ;

(ಈ) ಹಾಗಿದ್ದರೆ, ಈ ಯೋಜನೆಯಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಫಲಾನುಭವಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಅರಣ್ಯ ಭೂಮಿ ಒತ್ತುವರಿ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೬೮೬ (೭೮೧) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಅಕ್ರಮವಾಗಿ ಒತ್ತುವರಿಯಾಗಿರುವ ಅರಣ್ಯ ಭೂಮಿ ಎಷ್ಟು ;

(ಆ) ಇದುವರೆವಿಗೂ ಎಷ್ಟು ಪ್ರಮಾಣದ ಭೂಮಿಯನ್ನು ಒತ್ತುವರಿದಾರರಿಂದ ವಶಪಡಿಸಿಕೊಳ್ಳಲಾಗಿದೆ ;

(ಇ) ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ಎಷ್ಟು ಜನರ ವಿರುದ್ಧ ಸರ್ಕಾರ ಶಿಸ್ತಿನ ಕ್ರಮ ಜರುಗಿಸಿದೆ ?

## ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಸ್ಥಾಪಿಸುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೬೮೭ (೭೮೪) ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲಾ ಕೇಂದ್ರವನ್ನು ಹೊರತುಪಡಿಸಿ ಕ್ರೀಡಾಂಗಣ ಸೌಲಭ್ಯದಿಂದ ವಂಚಿತವಾಗಿರುವ ತಾಲ್ಲೂಕುಗಳಾವುವು ;

(ಆ) ಸದರಿ ತಾಲ್ಲೂಕುಗಳಿಗೆ ತಾಲ್ಲೂಕು ಕ್ರೀಡಾಂಗಣವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಎಷ್ಟು ಅವಧಿಯಲ್ಲಿ ಮಂಡ್ಯ ಜಿಲ್ಲೆಯ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ?

## ಬಾಲಕರನ್ನು ಜೀತಕ್ಕೆ ನೇಮಿಸಿಕೊಳ್ಳುತ್ತಿರುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–**

೬೮೮ (೭೮೫) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಪ್ರಾಪ್ತ ಬಾಲಕರನ್ನು ಜೀತಕ್ಕೆ ನೇಮಿಸಿಕೊಂಡಿರುವುದು ಮತ್ತು ನೇಮಿಸಿಕೊಳ್ಳುತ್ತಿರುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಪ್ರವೃತ್ತಿಯನ್ನು ತಡೆಯಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು ;

(ಇ) ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವ ಮತ್ತು ಜೀತ ಪದ್ಧತಿಗೆ ಮಕ್ಕಳನ್ನು ದೂಡದಂತೆ ಪಾಲಕರಲ್ಲಿ ಅರಿವು ಮುಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಬೀದರ್ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ

**ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೭೮೯ (೭೦೦) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಇರುವ ನೀರಾವರಿ ಯೋಜನೆಗಳು ಯಾವುದು ;

(ಆ) ಈ ಯೋಜನೆಗಳಿಗೆ ನೀಡಿದ ಅನುದಾನ ಎಷ್ಟು ; ಈ ಯೋಜನೆಗಳಿಂದ ಆ ಭಾಗದ ರೈತರಿಗೆ ಅನುಕೂಲವಾಗುವುದೇ ;

(ಇ) ಈ ಯೋಜನೆಗಳಿಗೆ ಕಳೆದ ಎರಡು ವರ್ಷಗಳಿಂದ ನೀಡಿರುವ ಅನುದಾನ ಎಷ್ಟು ? (ಯೋಜನೆವಾರು, ತಾಲ್ಲೂಕುವಾರು ವಿವರ ನೀಡುವುದು)

## ಸಾಮಾಜಿಕ ಭದ್ರತೆ ಯೋಜನೆ ಅನುಷ್ಠಾನ

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೯೦ (೬೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯ ಎಷ್ಟು ಜನರು ಸಾಮಾಜಿಕ ಭದ್ರತೆ ಯೋಜನೆ ಅಡಿಯಲ್ಲಿ ಬರುವ ಅಂಗವಿಕಲ, ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಪಡೆಯುತ್ತಿದ್ದಾರೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಇವರುಗಳಿಗೆ ಪ್ರತಿ ತಿಂಗಳು ಪಾವತಿ ಮಾಡುತ್ತಿರುವ ಹಣದ ಮೊತ್ತವೆಷ್ಟು ;

(ಇ) ಜಿಲ್ಲೆಯಲ್ಲಿ ಇನ್ನೂ ಅನೇಕ ಫಲಾನುಭವಿಗಳು ಈ ಯೋಜನೆಯ ಲಾಭದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೇ, ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಬೀದರ್ ಜಿಲ್ಲೆಯ ಬಡ ಕುಟುಂಬಗಳ ಬಗ್ಗೆ ;

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೬೯೧ (೭೦೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೀದರ್ ಜಿಲ್ಲೆಯಲ್ಲಿ ಬಡತನ ರೇಖೆಯಿಂದ ಬಳಲುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ಕುಟುಂಬಗಳನ್ನು ಗುರುತಿಸಿ ಸರ್ಕಾರ ಏನಾದರೂ ಸೌಲಭ್ಯವನ್ನು ಒದಗಿಸುವುದೇ ;

(ಇ) ಈ ಬಡ ಕುಟುಂಬಗಳು ಬಡತನದಿಂದ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ವಲಸೆ ಹೋಗುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಐ.ಟಿ.ಐ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೯೨ (೭೦೨) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯಲ್ಲಿ ಇರುವ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ಈ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಕಾಲೇಜುವಾರು ವಿವರ ನೀಡುವುದು)

(ಇ) ಈ ವಿದ್ಯಾರ್ಥಿಗಳಿಗೆ ಕಾರ್ಮಿಕ ಇಲಾಖೆ ಉದ್ಯೋಗಾವಕಾಶವನ್ನು ಕಲ್ಪಿಸಿದೆಯೇ ; (ಕಲ್ಪಿಸಿದ್ದರೆ, ವಿವರ ನೀಡುವುದು)

(ಈ) ಈ ಸೌಲಭ್ಯಗಳನ್ನು ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಇಲ್ಲದಿದ್ದರೆ, ಐ.ಟಿ.ಐ ಮುಗಿಸಿದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲಾಗುವುದೇ ?

## ಕೆರೆಗಳ ಅಭಿವೃದ್ಧಿ ಬಗ್ಗೆ.

**ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೬೯೩ (೬೯೯) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೀದರ್ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕೆರೆಗಳ ಸಂಖ್ಯೆ ಎಷ್ಟು ;

(ಆ) ಕಳೆದ ಎರಡು ವರ್ಷಗಳಲ್ಲಿ ಇಲ್ಲಿಯವರೆಗೆ ಕೆರೆಗಳ ಅಭಿವೃದ್ಧಿಗೆ ವಿವಿಧ ಯೋಜನೆ ಅಡಿ ವೆಚ್ಚ ಮಾಡಿದ ಹಣವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಹೊಸ ಕೆರೆಗಳನ್ನು ನಿರ್ಮಿಸುವ ವಿಚಾರ ಸರ್ಕಾರದ ಮುಂದಿದೆಯೆ, ಇದ್ದರೆ, ಯಾವ ಯಾವ ತಾಲ್ಲೂಕುಗಳಲ್ಲಿ ಕೆರೆಗಳನ್ನು ನಿರ್ಮಿಸಲಾಗುವುದು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಕೈಗಾರಿಕೆಗಳಿಗೆ ನೀರು ಸರಬರಾಜು ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೭೯೪ (೮೦೮) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ಕಾಳಿ ನದಿಯಿಂದ ಯಾವ ಯಾವ ಕೈಗಾರಿಕೆಗಳು ಎಷ್ಟು ಪ್ರಮಾಣದ ನೀರನ್ನು–ಪ್ರತಿದಿನ ಹಾಗೂ ಪ್ರತಿ ವರ್ಷಕ್ಕೆ ಎಷ್ಟು ಘನ ಲೀಟರ್ ಬಳಸುತ್ತಿದ್ದಾರೆ ; ಪ್ರತಿಯೊಂದು ಕಾರ್ಖಾನೆ, ನಗರಸಭೆ, ಗ್ರಾಮ ಪಂಚಾಯಿತಿಗಳ ವಿವರ ನೀಡುವುದು ಹಾಗೂ ಪ್ರಮಾಣವನ್ನು ನಿರ್ದಿಷ್ಟವಾಗಿ ತಿಳಿಸುವುದು;

(ಆ) ಸರ್ಕಾರಕ್ಕೆ ಈ ನೀರು ಪೂರೈಸುವುದರಿಂದ ಆಗುವ ಲಾಭವೇನು ;

(ಇ) ಕಾಳಿನದಿಯ ನೀರಿನಲ್ಲಿರುವ ಮಾಲಿನ್ಯದ ಕುರಿತು ಯಾವ ಯಾವ ಸಂಸ್ಥೆಗಳಿಂದ ಲವಣಾಂಶ, ಕೈಗಾರಿಕಾ ರಾಸಾಯನಿಕಗಳ (ತ್ಯಾಜ್ಯ ವಸ್ತುಗಳ) ಕಳೆದ ಹತ್ತು ವರ್ಷಗಳ ವರದಿ ವರ್ಷವಾರು ನೀಡುವುದು ;

(ಈ) ಜಿಲ್ಲಾಧಿಕಾರಿಗಳಿಗೆ, ಮಾಲಿನ್ಯ ಮಂಡಳಿಗೆ ಬಂದಿರುವ ದೂರುಗಳು ಯಾವುದು ? ದೂರುದಾರರ ವಿವರ ನೀಡುವುದು

## ದಾಂಡೇಲಿ ಸುರಕ್ಷಿತ ಅರಣ್ಯದ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೬೯೫ (೮೧೯) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿರುವ ದಾಂಡೇಲಿ ಸಂರಕ್ಷಿತ ಅರಣ್ಯದ ಬಹುಭಾಗವನ್ನು ECOLOGICAL SENSITIVE AREA (ESA) ದಿಂದ ಕೈಬಿಡಲು ಕಾರಣವೇನು ;

(ಆ) ಉತ್ತರ ಕನ್ನಡ ಜಿಲ್ಲೆಯ ESA ಪ್ರದೇಶದ ನಕ್ಷೆಯನ್ನು ನೀಡುವುದು;

(ಇ) ESA ಪ್ರದೇಶದಲ್ಲಿ ಯಾವ ಯಾವ ಚಟುವಟಿಕೆಗಳನ್ನು ನಡೆಸಲು ಅನುಮತಿ ನೀಡಲಾಗುತ್ತದೆ ; ಯಾವ ಯಾವ ಚಟುವಟಿಕೆಗಳಿಗೆ ನಿಷೇಧವಿರುತ್ತದೆ ; (ವಿವರ ನೀಡುವುದು)

(ಈ) ಕರ್ನಾಟಕ ರಾಜ್ಯದ ಸಂಪೂರ್ಣ ESA ಪ್ರದೇಶದ ವ್ಯಾಪ್ತಿ ಎಷ್ಟು ; ಜನಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ಎತ್ತಿನ ಹೊಳೆ ಕಾಮಗಾರಿಯ ಪ್ರಗತಿ ಮಾಹಿತಿ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೬೯೬ (೮೦೬) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಎತ್ತಿನ ಹೊಳೆ ನೀರಾವರಿ ಕಾಮಗಾರಿ ಯಾವ ಹಂತದಲ್ಲಿದೆ ;

(ಆ) ೨೦೧೪–೧೫, ೨೦೧೫–೧೬ನೇ ಸಾಲಿನಲ್ಲಿ ಈ ಯೋಜನೆಗೆ ಬಿಡುಗಡೆಯಾದ ಅನುದಾನ ಎಷ್ಟು ; ಕೈಗೊಂಡ ಕಾಮಗಾರಿಗಳು ಯಾವುವು ; ಈ ಯೋಜನೆ ಅಡಿಯಲ್ಲಿ ಖರ್ಚಾದ ಹಣ ಎಷ್ಟು ;

(ಇ) ಈ ಯೋಜನೆಯ ವಿರುದ್ಧ ಎಷ್ಟು ದಾವೆಗಳು ಕೋರ್ಟ್‌ನಲ್ಲಿವೆ ; ಯಾವ ಕಾರಣಕ್ಕಾಗಿ ಈ ದಾವೆಗಳನ್ನು ಹೂಡಲಾಗಿದೆ ; ಎಷ್ಟು ದಾವೆಗಳು ಇತ್ಯರ್ಥವಾಗಿವೆ ; ಇತ್ಯರ್ಥವಾಗದೆ ಬಾಕಿ ಉಳಿದಿರುವ ದಾವೆಗಳ ಸಂಖ್ಯೆ ಎಷ್ಟು ; ಈ ದಾವೆಗಳು ಯಾವ ನ್ಯಾಯಾಲಯದಲ್ಲಿ ಇವೆ ; ಯಾವ ಕಾರಣಕ್ಕಾಗಿ ಇತ್ಯರ್ಥವಾಗದೆ ಉಳಿದಿವೆ ?

## ಪರಿಸರ ಮಾಲಿನ್ಯ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೬೯೭ (೮೧೦) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ, ದಾಂಡೇಲಿ ನಗರದ ಸುತ್ತಮುತ್ತ ಪರಿಸರ ಮಾಲಿನ್ಯ ಉಂಟಾಗುತ್ತಿರುವ ಕುರಿತು

ಸಾರ್ವಜನಿಕ ಸಭೆ ಕರೆಯಲು ದಿನಾಂಕ: ೧೭.೦೩.೨೦೧೫ ರಂದು ನಂ. ಡಿ.ಸಿ.ಬಿ ಮನವಿ ೫೮೮/೨೦೧೪–೧೫ ರಂದು ಮಾಡಿರುತ್ತಾರೆಯೇ ;

(ಆ) ವಿಷಯವನ್ನು ಪರಿಶೀಲಿಸಿ, ತನಿಖೆ ಕೈಗೊಂಡು ನಿಯಮಾನುಸಾರ ಪ್ರಾದೇಶಿಕ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಾರವಾರ ಅರ್ಜಿದಾರರಿಗೆ ಹಿಂಬರಹ ನೀಡುತ್ತಾರೆಯೇ;

(ಇ) ಹಿಂಬರಹ ನೀಡಿದ ವಿವರಗಳ ವರದಿಯನ್ನು ಒದಗಿಸುವುದು;

(ಈ) ಕಾಳಿನದಿಯ ಕೆಳಹರಿವಿನ ನೀರಿನ ಮಾಲಿನ್ಯ ಪರಿಶೀಲಿಸಲು ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ, ಪಂಚನಾಮೆ ನಡೆಸಿರುತ್ತಾರೆಯೇ ?

## ಕಾಳಿ ಟೈಗರ್ ಯೋಜನೆ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೬೯೮ (೮೦೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಾಳಿ ಟೈಗರ್ ಯೋಜನೆಯ ವ್ಯಾಪ್ತಿ ಎಷ್ಟು ;

(ಆ) ಕಾಳಿ ಟೈಗರ್ ಯೋಜನೆ ಎಂದು ಅನುಷ್ಠಾನಕ್ಕೆ ಬಂದಿದ್ದು ಯಾವಾಗ ;

(ಇ) ಈ ಯೋಜನೆಯಲ್ಲಿ ಎಷ್ಟು ಹುಲಿಗಳ ಕುರಿತಾಗಿ ಮಾಹಿತಿ ಇದೆ ; ಗಂಡು ಹುಲಿಗಳ ಮತ್ತು ಹೆಣ್ಣು ಹುಲಿಗಳ ಸಂಖ್ಯೆ ಎಷ್ಟು ; ಮರಿ ಹುಲಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಈ ಹುಲಿ ಯೋಜನೆಯ ಕುರಿತಾದ ಬ್ಲಾಕ್‌ಗಳಿರುವ ಸ್ಪಷ್ಟ ನಕ್ಷೆಯ ಪ್ರತಿ ನೀಡುವುದು ?

# ಅರಣ್ಯ ಪ್ರದೇಶ

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೬೯ (೭೪೪) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಒಟ್ಟಾರೆ ಭೂಪ್ರದೇಶದ ವಿಸ್ತೀರ್ಣವೆಷ್ಟು ; ಆ ಪೈಕಿ ಎಷ್ಟು ವಿಸ್ತೀರ್ಣದಲ್ಲಿ ಅರಣ್ಯ ಪ್ರದೇಶವಿದೆ ;

(ಆ) ಪ್ರಕೃತಿ ವಿಕೋಪಗಳಾದ ಅತಿವೃಷ್ಠಿ ಮತ್ತು ಅನಾವೃಷ್ಠಿ ತಡೆಯಲು ಹಾಗೂ ಪರಿಸರ ಸಮತೋಲನ ಕಾಪಾಡಲು ವೈಜ್ಞಾನಿಕವಾಗಿ ಇರಬೇಕಾಗಿರುವ ಅರಣ್ಯ ಪ್ರದೇಶವೆಷ್ಟು ;

(ಇ) ಯಥೇಚ್ಛವಾಗಿ ಬೆಳೆದು ನಿಂತಿರುವ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು ; (ಹೆಕ್ಟೇರ್‌ಗಳಲ್ಲಿ ವಿವರ ನೀಡುವುದು)

(ಈ) ಅರಣ್ಯ ಪ್ರದೇಶದ ರಾಷ್ಟ್ರೀಯ ಸರಾಸರಿ ಎಷ್ಟು ; ರಾಜ್ಯದ ಸರಾಸರಿ ಎಷ್ಟು ;

(ಉ) ರಾಷ್ಟ್ರೀಯ ಸರಾಸರಿಗೆ ಸರಿದೂಗಿಸಲು ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಊ) ಪ್ರತಿ ವರ್ಷ ಅರಣ್ಯ ಇಲಾಖೆ ವಿವಿಧ ಯೋಜನೆಗಳಡಿ ನೆಡುವ ಸಸಿಗಳ ಪ್ರಮಾಣ ಎಷ್ಟು ; ಅವುಗಳ ಪೈಕಿ ಶೇಕಡವಾರು ಬದುಕುಳಿಯುವ ಸಸಿಗಳ ಸಂಖ್ಯೆ ಎಷ್ಟು ; ಮತ್ತು ನಾಶವಾಗುವ ಸಸಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

# ವಿಧಾನಸೌಧದ ಸುತ್ತಮುತ್ತ ಇರುವ ಕ್ಲಬ್‌ಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೭೦೦ (೭೪೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ವಿಧಾನಸೌಧದಿಂದ ೩.೦ ಕಿ.ಮೀ. ಅಂತರದಲ್ಲಿ ಇರುವ ಕ್ಲಬ್‌ಗಳು ಯಾವುವು ;

(ಆ) ಆ ಕ್ಲಬ್‌ಗಳಿಗೆ ಸರ್ಕಾರ ನೀಡಿರುವ ಮತ್ತು ನೀಡುತ್ತಿರುವ ಸೌಲಭ್ಯಗಳಾವುವು ; (ಕ್ಲಬ್‌ವಾರು ಮಾಹಿತಿ ನೀಡುವುದು)

(ಇ) ಆ ಕ್ಲಬ್‌ಗಳಲ್ಲಿ ಎಷ್ಟು ಜನ ಸದಸ್ಯರಿದ್ದಾರೆ ; ಆ ಪೈಕಿ ಖಾಯಂ ಸದಸ್ಯರು ಮತ್ತು ತಾತ್ಕಾಲಿಕ ಸದಸ್ಯರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಈ) ಗಾಲ್ಫ್ ಕ್ಲಬ್ , ಸೆಂಚುರಿ ಕ್ಲಬ್, ಟರ್ಫ್ ಕ್ಲಬ್, ಬೌರಿಂಗ್ ಇನ್‌ಸ್ಟಿಟ್ಯೂಟ್, ಬೆಂಗಳೂರು ಕ್ಲಬ್, ಟೆನ್ನಿಸ್ ಕ್ಲಬ್ ಮತ್ತು ಸಚಿವಾಲಯ ಕ್ಲಬ್‌ನ ಖಾಯಂ /ತಾತ್ಕಾಲಿಕ ಸದಸ್ಯರ ಸಂಖ್ಯೆ ಎಷ್ಟು; ಅವರುಗಳ ಹೆಸರು ಮತ್ತು ವಿಳಾಸ ಸಮೇತ ಮಾಹಿತಿ ನೀಡುವುದು ;

(ಉ) ಆ ಸದಸ್ಯರುಗಳ ಪೈಕಿ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಸದಸ್ಯತ್ವ ಹೊಂದಿದ್ದಾರೆಯೇ ; ಹೊಂದಿದಲ್ಲಿ, ಅವರ ಹೆಸರು, ಹುದ್ದೆ ಮಾಹಿತಿ ನೀಡುವುದು ;

(ಊ) ಯಾವುದೇ ಅಧಿಕಾರಿ /ನೌಕರರು ಅಧಿಕೃತ ಕರ್ತವ್ಯದ ವೇಳೆಯಲ್ಲಿ ಸದರಿ ಕ್ಲಬ್‌ಗಳ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಸರ್ಕಾರ ಗಮನಿಸಿದೆಯೇ ; ಇದ್ದಲ್ಲಿ, ಆ ಅಧಿಕಾರಿ/ನೌಕರರರ ಮಾಹಿತಿ ನೀಡುವುದು ;

(ಋ) ಹಾಗೆ ಭಾಗವಹಿಸುವವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಶಿಸ್ತಿನ ಕ್ರಮಗಳೇನು ?

## ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಕಾರ್ಯ

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೨೦೧ (೭೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಕಾರ್ಯವನ್ನು ಯಾವಾಗ ಮಾಡಲಾಗಿದೆ ; ಅದಕ್ಕೆ ತಗಲಿರುವ ವೆಚ್ಚವೆಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸಮೀಕ್ಷೆಯ ವರದಿಯನ್ನು ಸಲ್ಲಿಸಲಾಗಿದೆಯೇ ; ಸಲ್ಲಿಸಿದ್ದಲ್ಲಿ, ವರದಿಯ ಆಧಾರದ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಆ ಸಮೀಕ್ಷೆ ರೀತ್ಯಾ ರಾಜ್ಯದಲ್ಲಿ ಯಾವ ಯಾವ ವರ್ಗ, ಜಾತಿ ಜನಸಂಖ್ಯೆ ಇದೆ ; (ತಾಲ್ಲೂಕುವಾರು ವಿವರ ನೀಡುವುದು)

(ಈ) ಆ ವರದಿಯ ರೀತ್ಯಾ ಅತೀ ಹಿಂದುಳಿದ ಸಮಾಜಗಳು ಯಾವುವು; ಅದಕ್ಕೆ ಕಾರಣಗಳೇನು ; (ಮಾಹಿತಿ ನೀಡುವುದು)

(ಉ) ಆ ಹಿಂದುಳಿದವರನ್ನು ಪ್ರಗತಿಯತ್ತ ಕೊಂಡೊಯ್ಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಪ್ರತಿಷ್ಠಿತ ಕ್ಲಬ್‌ಗಳು ಮತ್ತು ಅವುಗಳ ನಿಯಂತ್ರಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು) :–**

೨೦೨ (೭೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಎಷ್ಟು ಪ್ರತಿಷ್ಠಿತ ಕ್ಲಬ್‌ಗಳಿವೆ ; ಅವು ಯಾವುವು ; (ವಿವರ ನೀಡುವುದು)

(ಆ) ಆ ಕ್ಲಬ್‌ಗಳಿಗೆ ಸರ್ಕಾರ ನೀಡಿರುವ ಸೌಲಭ್ಯಗಳಾವುವು ; (ಕ್ಲಬ್‌ವಾರು ಮಾಹಿತಿ ನೀಡುವುದು)

(ಇ) ಇಂತಹ ಕ್ಲಬ್‌ಗಳನ್ನು ನಿಯಂತ್ರಿಸಲು ಸರ್ಕಾರಕ್ಕಿರುವ ಅಧಿಕಾರವೇನು; ಹಾಗೆ ನಿಯಂತ್ರಿಸಲು ನಿಯಮಗಳನ್ನು ರೂಪಿಸಲಾಗಿದೆಯೇ ; (ವಿವರಗಳೊಂದಿಗೆ)

(ಈ) ನಿಯಮಗಳನ್ನು ಉಲ್ಲಂಘಿಸಿದ ಕ್ಲಬ್‌ಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಸಣ್ಣ ನೀರಾವರಿ ಇಲಾಖೆಗೆ ಬಿಡುಗಡೆಯಾದ ಹಣ

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೦೩ (೭೭೨) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗದಗ ಮತ್ತು ಬಾಗಲಕೋಟೆ ಜಿಲ್ಲೆಗೆ ಕಳೆದ ೨ ವರ್ಷಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು ; ಖರ್ಚು ಮಾಡಲಾದ ಮೊತ್ತವೆಷ್ಟು ; ಖರ್ಚಾಗದೆ ಉಳಿದ ಮೊತ್ತವೆಷ್ಟು ;

(ಆ) ಈ ಕಾಮಗಾರಿಗಳನ್ನು ಯಾವ ಸಂಸ್ಥೆ ಅಥವಾ ಗುತ್ತಿಗೆದಾರರಿಗೆ ನೀಡಲಾಗಿದೆ ;

(ಇ) ಈ ಯೋಜನೆಗಳಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳಿಗೆ ಸರ್ಕಾರ ಕಾಲಮಿತಿಯನ್ನು ನಿಗಧಿಗೊಳಿಸಿದೆಯೇ ? (ವಿವರ ನೀಡುವುದು)

## ಕಾಡು ಹಂದಿಗಳಿಂದ ಬೆಳೆ ಹಾನಿಯಾಗುತ್ತಿರುವ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೪ (೭೭೮) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಜಿಲ್ಲೆಯ ಚಿಂಚೋಳಿ, ಚಿತ್ತಾಪುರ ಮತ್ತು ಅಫಜಲಪುರ ಈ ತಾಲ್ಲೂಕುಗಳಲ್ಲಿ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಕಬ್ಬು, ಕಲ್ಲಂಗಡಿ ಬೆಳೆಗಳನ್ನು ಕಾಡು ಹಂದಿಗಳೂ ದಾಳಿ ಮಾಡಿ ಹಾನಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ ಕಾಡು ಹಂದಿಗಳಿಂದ ಬೆಳೆ ಹಾನಿ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ? (ವಿವರ ನೀಡುವುದು)

## ಸುರಪುರ ತಾಲ್ಲೂಕಿನ ಕೆರೆಗೆ ವಿವಿಧ ದೇಶಗಳಿಂದ ಪಕ್ಷಿಗಳು ವಲಸೆ ಬರುತ್ತಿರುವ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೦೫ (೭೭೭) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಸಮೀಪದಲ್ಲಿರುವ ೮೧೧ ಎಕರೆಯಷ್ಟು ದೊಡ್ಡದಾದ ಕೆರೆ ಇದ್ದು, ಈ ಕೆರೆಗೆ ವಿವಿಧ ದೇಶಗಳಿಂದ ಲಕ್ಷಾಂತರ ಪಕ್ಷಿಗಳು ವಲಸೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಹಕ್ಕಿ-ಪಕ್ಷಿಗಳ ರಕ್ಷಣೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

(ಇ) ಈ ಕೆರೆಯನ್ನು ಕೊಕ್ಕರೆ ಬೆಳ್ಳೂರು ಕೆರೆಯಂತೆ ಅಭಿವೃದ್ಧಿಪಡಿಸಿ ಪಕ್ಷಿಧಾಮವೆಂದು ಘೋಷಿಸುವ ಯೋಜನೆ ಸರ್ಕಾರಕ್ಕಿದೆಯೇ ; ಇದ್ದರೆ, ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

## ಕಲಬುರಗಿ ಜಿಲ್ಲೆಯ ಕೆರೆಗಳ ಹೂಳೆತ್ತುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ

**ಶ್ರೀ ಇಕ್ಬಾಲ್ ಅಹ್ಮದ್ ಸರಡಗಿ (ನಾಮ ನಿರ್ದೇಶನ ಹೊಂದಿದವರು) :-**

೭೦೬ (೭೩೬) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಜಿಲ್ಲೆಯಲ್ಲಿ ಅಂತರ್ಜಲ ವೃದ್ಧಿಗೆ ಕೆರೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೆರೆಗಳಲ್ಲಿ ಹೂಳೆತ್ತುವುದು ಅವಶ್ಯಕವಾಗಿದೆ ;

(ಇ) ಕಳೆದ ೩ ವರ್ಷಗಳಲ್ಲಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕೆರೆಗಳ ಹೂಳೆತ್ತಲಾಗಿದೆ ; ಇದರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು ; ಬಾಕಿ ಉಳಿದಿರುವ ಕಾಮಗಾರಿಗಳೆಷ್ಟು ; ಹಾಗೂ ಬಾಕಿ ಉಳಿದಿರುವುದಕ್ಕೆ ಕಾರಣವೇನು ? (ವಿವರ ಒದಗಿಸುವುದು)

## ರಾಜ್ಯದಲ್ಲಿರುವ ಕೆರೆಗಳ ಮಾಹಿತಿ ನೀಡುವ ಕುರಿತು

**ಶ್ರೀ ಲಹರ ಸಿಂಗ್ ಸಿರೋಯಾ (ನಾಮ ನಿರ್ದೇಶನ ಹೊಂದಿದವರು) :–**

೭೦೭ (೭೪೩) ಮಾನ್ಯ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕೆರೆಗಳ ಸಂರಕ್ಷಣಾ ಅಭಿವೃದ್ಧಿ ಪ್ರಾಧಿಕಾರದಿಂದ ಈವರೆವಿಗೆ ಎಷ್ಟು ಕೆರೆಗಳನ್ನು ಗುರುತಿಸಲಾಗಿರುತ್ತದೆ :

(ಆ) ರಾಜ್ಯದ ಅನೇಕ ಭಾಗಗಳಲ್ಲಿ ಕೆರೆಗಳ ಒತ್ತುವರಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಸಂಬಂಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಅಕ್ರಮ ಸಕ್ರಮ ಯೋಜನೆ

**ಶ್ರೀ ಎಂ. ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೭೦೮ (೮೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಕ್ರಮ-ಸಕ್ರಮ ಯೋಜನೆಗೆ ಸಂಬಂಧಿಸಿದಂತೆ, ತಾತ್ಕಾಲಿಕವಾಗಿ ೯೪ಸಿ ಕಾನೂನಿನ ಅಡಿಯಲ್ಲಿ ಮಂಜೂರಾತಿ ಆದೇಶ ನೀಡಲಾಗುತ್ತಿದೆಯೇ ;

(ಆ) ಈ ಮೇಲ್ಕಂಡ ಜಿಲ್ಲೆಗಳಲ್ಲಿ ಎಷ್ಟು ಅರ್ಜಿಗಳು ಸ್ವೀಕರಿಸಲಾಗಿದೆ ; ಇದರಲ್ಲಿ ತಿರಸ್ಕೃತ ಅರ್ಜಿಗಳು ಎಷ್ಟು ;

(ಇ) ತಾತ್ಕಾಲಿಕ ಆದೇಶಗಳನ್ನು ಎಷ್ಟು ಜನ ಫಲಾನುಭವಿಗಳಿಗೆ ವಿತರಿಸಲಾಗಿದೆ ; (ಮೂರು ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು )

(ಈ) ಈಗ ನೀಡಿರುವ ತಾತ್ಕಾಲಿಕ ಆದೇಶವೇ ಅಂತಿಮವಾಗಿದೆಯೇ; ಅಥವಾ ಪರಿಷ್ಕೃತ ಆದೇಶ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ ;

(ಉ) ಇದ್ದಲ್ಲಿ, ಎಷ್ಟು ಕಾಲಮಿತಿಯಲ್ಲಿ ವಿತರಿಸಲಾಗುತ್ತದೆ ;

(ಊ) ಖಾಯಂ ಆದೇಶ ನೀಡಲು ಕಾನೂನಿನಲ್ಲಿ ಏನಾದರೂ ತೊಡಕುಗಳಿವೆಯೇ ? (ಇದ್ದಲ್ಲಿ ವಿವರ ನೀಡುವುದು)

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0 315/1000 ಪ್ರತಿಗಳು/19–03–2016